ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ 26ನೇ ಫೆಬ್ರವರಿ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಸದನದಲ್ಲಿ ಆಡಳಿತಪಕ್ಷದ ಸದಸ್ಯರುಗಳ ಗೈರು ಹಾಜರಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ, ಏನೆಂದರೆ, ಕನಿಷ್ಠ ಆಡಳಿತ ಪಕ್ಷದ ಕಡೆಯಿಂದ ಕೋರಂ ಆಗುವಷ್ಟು ಸದಸ್ಯರು ಬಂದರೆ ಸದನಕ್ಕೆ ಶೋಭೆ, ಗೌರವ ಬರುತ್ತದೆ, ಅಂತೆಯೇ ನಮಗೂ ನಿಮಗೂ, ಎಲ್ಲರಿಗೂ ಕೂಡ ಗೌರವ ಬರುತ್ತದೆ. ಕೇವಲ 5-6 ಸದಸ್ಯರುಗಳು ಬಂದರೆ ಸದನ ನಡೆಸುವುದು ಹೇಗೆ? ಇದು ತಮಗೇ ಬಿಟ್ಟಿದ್ದುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮೊಗಸಾಲೆಯಲ್ಲಿ ಕೆಲವರು ಇದ್ದಾರೆ, ಅವರು ಬರುತ್ತಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಂತ್ರಿಗಳಿಲ್ಲರೂ ಮೊಗಸಾಲೆಯಲ್ಲೇ ಇರುವುದಾದರೆ ಶಾಸಕರುಗಳು, ಅಧ್ಯಕ್ಷರು, ಎಲ್ಲರೂ ಅಲ್ಲಿಗೇ ಹೋಗೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಹೇಳಿರತಕ್ಕದ್ದು ಸರಿಯಾದುದು ಮತ್ತು ಸಹಜವಾದುದು. ಅದನ್ನು ನಾವೆಲ್ಲರೂ ಸಹ ಗಮನಿಸಬೇಕಾಗಿರತಕ್ಕದ್ದು. ಈ ಸದನವು ಸರ್ವೋಚ್ಚವಾಗಿರತಕ್ಕದ್ದು, ಈ ಸದನಕ್ಕೆ ಗೌರವವನ್ನು ಕೊಡಬೇಕಾದುದು ಮತ್ತು ಇಲ್ಲಿ ಬಂದು ಕುಳಿತುಕೊಳ್ಳಬೇಕಾಗಿರತಕ್ಕದ್ದು ನಮ್ಮ ಆದ್ಯಕರ್ತವ್ಯ. ಅದರಲ್ಲೂ ಮುಖ್ಯವಾಗಿ ಸರ್ಕಾರದಲ್ಲಿರತಕ್ಕ, ಮತ್ತು ಆಡಳಿತ ಪಕ್ಷದ ಸದಸ್ಯರುಗಳು ಮಾಡಬೇಕಾಗಿರುವ ಪ್ರಥಮ ಕರ್ತವ್ಯವೆಂದು ನನ್ನ ಭಾವನೆ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ನಾವು ಆಡಳಿತ ಪಕ್ಷದವರಿಗೆ ಏನೆಲ್ಲಾ ಅನುಕೂಲತೆಗಳನ್ನು ಕೊಟ್ಟಿದ್ದೇವೆ. ಸರ್ಕಾರದ ಮಟ್ಟದಲ್ಲಿ ಇಲ್ಲಿನ ಕಾರ್ಯಕಲಾಪಗಳ ಬಗ್ಗೆ ನೋಡಿಕೊಳ್ಳಲು ಮುಖ್ಯಸಚೇತಕರನ್ನು ಇಟ್ಟಿದ್ದೇವೆ. ಅವರು ಪಾರ್ಲಿಮೆಂಟರಿ ಪಕ್ಷನಂರಿ. ಅವರಿಗೆ ರಾಜ್ಯ ಸಚಿವರಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಅನಂತರ ಶಾಸಕಾಂಗ ಪಕ್ಷಕ್ಕೆ ಕಾರ್ಯದರ್ಶಿಯವರು ಇರುತ್ತಾರೆ,

ಅಲ್ಲಿ ದೂರವಾಣಿಯ ಸೌಲಭ್ಯವಿರುತ್ತದೆ, ಇನ್ನಿತರೆ ಅಗತ್ಯವಾದ ಎಲ್ಲಾ ಸೌಲಭ್ಯಗಳೂ ಇರುತ್ತವೆ. ಅವರವರ ವ್ಯವಸ್ಥೆಯನ್ನು ಅವರವರು ಮಾಡಿಕೊಳ್ಳಬೇಕು. ಆದರೆ ಮಾಡುವುದಿಲ್ಲವಲ್ಲಾ. ಹೋದ ಅಧಿವೇಶನದಲ್ಲಿ ಕೆಲವು ಸದಸ್ಯರುಗಳು ಕಂಟಿನ್ಯುಯಸ್ ಆಗಿ ಹಾಜರಾಗಿದಿದ್ದರಿಂದ ಅವರ ಹೆಸರುಗಳನ್ನು ಇಲ್ಲಿ ಓದಿ ಹೇಳಿದೆ. ಕೆಲವರು ಇಲ್ಲಿಗೆ ಬಂದು ಸಭೆಯಲ್ಲಿ ಪಾಲುಗೊಳ್ಳದೆ ಕೇವಲ ಹಾಜರಾತಿಯಲ್ಲಿ ಸಹಿ ಮಾಡಿ ಹೋಗುತ್ತಿದ್ದಾರೆಂಬುದು ನನ್ನ ಗಮನಕ್ಕೆ ಬಂದು, ಆಗ ದಯಮಾಡಿ ಸಭೆಗೆ ಹಾಜರಾಗಬೇಕೆಂದು ಅವರಲ್ಲಿ ಕೇಳಿಕೊಂಡೆ. ಇನ್ನು ಯಾವ್ಯಾವ ರೀತಿ ನಾನು ಕ್ರಮತೆಗೆದುಕೊಳ್ಳಲು ಸಾಧ್ಯ ನೀವೇ ಹೇಳಿ. ಸ್ಕೂಲ ರೀತಿ ಇದನ್ನು ನಡೆಸಲು ಆಗುವುದಿಲ್ಲವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಪ್ರತಿಸಲವೂ ವಿರೋಧ ಪಕ್ಷದವರೇ ಕೋರಂ ಮಾಡಿಕೊಡಬೇಕೆಂದು ಆಡಳಿತ ಪಕ್ಷದವರ ಅಪೇಕ್ಷೆ ಇದ್ದರೆ, ಅದರಂತೆಯೇ ಆಗಲಿ, ಅವರು ಅಷ್ಟೇ ಸಂಖ್ಯೆಯಲ್ಲಿ ಹಾಜರಾಗಲಿ;

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬೇರೆ ಪ್ರಶ್ನೆಗಳಿಲ್ಲ, ಬೇರೆ ಉತ್ತರವಿಲ್ಲ. ನಾವು ಯಾವಾಗಲೂ ಇದೇ ಪ್ರಶ್ನೆ ಕೇಳುವುದು, ಅವರು ಅದೇ ಉತ್ತರ ಹೇಳುವುದು. ಇದರಲ್ಲಿ ಏನೂ ಬದಲಾವಣೆಯೇ ಆಗಿಲ್ಲ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಭೀಮಾರಿಯನ್ನು ಹಾಕಬೇಕಾಗುತ್ತದೆ.

ಅಧ್ಯಕ್ಷರು : ಅದಕ್ಕೂ ಕಾರಣವಿದೆ. ಭೀಮಾರಿಯನ್ನು ಹಾಕಲು ಬರುವುದಿಲ್ಲ. ಕಾರಣವೇನೆಂದರೆ ಈ ಸಲ ವಿರೋಧ ಪಕ್ಷದವವ ಸಂಖ್ಯೆ ಜಾಸ್ತಿಯಾಗಿದ್ದೀರಿ. ಕಲಾಪಗಳಲ್ಲಿ ಎಲ್ಲಾ ಅವಕಾಶಗಳೂ ತಮಗೇ ಸಿಗುತ್ತವೆ. ಮಂತ್ರಿಗಳು ಏನೋ ಅದೊಂದು, ಇದೊಂದು ಉತ್ತರವನ್ನು ಹೇಳುವುದನ್ನು ಬಿಟ್ಟರೆ ಬೇರೆ ಅವಕಾಶ ಸಿಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಅವರ ಆಂತರಿಕ ವಿಷಯವು ಸದನದ ಒಳಗಡೆ ವ್ಯಕ್ತವಾಗುತ್ತಿದೆಯಲ್ಲ. ಪಕ್ಷದೊಳಗೆ ಇರುವ ಜಗಳದ ವಿಷಯವು ಸದನದಲ್ಲಿ ವ್ಯಕ್ತವಾಗುತ್ತಿದೆಯಲ್ಲ;

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಮಾತನಾಡುತ್ತಾ ಸದಸ್ಯರುಗಳು ಮೊಗಸಾಲೆಯಲ್ಲಿದ್ದಾರೆ, ಬರುತ್ತಾರೆಂದು ಹೇಳಿದರು. ಆದರೆ ಸಭೆಯು ಪ್ರಾರಂಭವಾಗುವ ಮೊದಲು ಬೆಲ್ ಆಗುವ ಉದ್ದೇಶವೇನೆಂದರೆ ಮೊಗಸಾಲೆಯಲ್ಲಿರುವವರು ಒಳಗೆ ಬರಬೇಕೆಂದು. ಬೆಲ್ ನಿಂತಮೇಲೆ ಸದಸ್ಯರುಗಳು ಒಳಗೆ ಬಂದಿದ್ದಾರೆಂದು ಅರ್ಥವಾಗುತ್ತದೆ. ಬೆಲ ನಿಂತಮೇಲೂ ಸದಸ್ಯರು ಒಳಗೆ ಬರದಿದ್ದರೆ ಹೇಗೆ? ನಾವೇ ಅಲ್ಲಿಗೆ ಹೋಗಿ ಬಿಟ್ಟರೆ ಆಯಿತು.

ಅಧ್ಯಕ್ಷರು : ವಿರೋಧ ಪಕ್ಷದವರ ಸದಸ್ಯರ ಸಂಖ್ಯೆ ಜಾಸ್ತಿ ಇರುವುದರಿಂದ ಆಡಳಿತ ಪಕ್ಷದ ಸದಸ್ಯರು ಸಕ್ರೀಯವಾಗಿ ಇಲ್ಲಿ ಪಾಲುಗೊಳ್ಳಲು ಅವಕಾಶ ಸಿಗುವುದಿಲ್ಲ. ಇದೂ ಒಂದು ಕಾರಣವಾಗುತ್ತದೆ. ಮಂತ್ರಿಗಳು ಉತ್ತರ ಅದು ಇದು ಕೊಟ್ಟುಬಿಡುತ್ತಾರೆ. ಆದ್ದರಿಂದ ನಾವೇನು ಮಾಡುವುವೆಂದು ಬೇಸರ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗೌರವಯುತವಾಗಿರುವ ಸಭೆ. ಅಧ್ಯಕ್ಷರು ಬಂದಮೇಲೆ ಸರ್ಕಾರದ ಟ್ರೆಜರಿ ಬೆಂಚ್‌ನಿಂದ ಸದಸ್ಯರು ಬರುತ್ತಾರೆಂದರೆ ಅದು ಈ ಸದನಕ್ಕೆ ಲಕ್ಷಣವನ್ನು ತರತಕ್ಕದ್ದಲ್ಲ. ಅಧ್ಯಕ್ಷರು ಬರುವಾಗ ನಾವೆಲ್ಲರೂ ಸ್ವಾಗತ ಮಾಡಬೇಕು.

ಅಧ್ಯಕ್ಷರು : ನಾವೆಲ್ಲರೂ ಒಟ್ಟಿಗೆಯೇ ಹೊರಡುತ್ತೇವೆ. ಆದರೆ ನಾನು ವೇಗವಾಗಿ ನಡೆಯುತ್ತೇನೆ. ಆದ್ದರಿಂದ ನಾನು ಬೇಗ ಬರುತ್ತೇನೆ. ಅವರು ಸ್ವಲ್ಪ ನಿಧಾನವಾಗಿ ಹೆಜ್ಜೆ ಇಡುತ್ತಾರೆ. ಆದ್ದರಿಂದ ಸ್ವಲ್ಪ ತಡವಾಗಿ ಬರುತ್ತಾರಷ್ಟೇ.

ಶ್ರೀ ಟಿ. ಬಿ. ಜಯಚಂದ್ರ : ಅಧ್ಯಕ್ಷರೇ, ಇದು ಯಾರಿಗೂ ಗೌರವವನ್ನು ತರುವುದಿಲ್ಲ.

(ಗೊಂದಲ)

ಶ್ರೀ ಡಿ. ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಮಾಡಿರುವ ತಪ್ಪನ್ನು ತಾವು ನಿಜವಾಗಿಯೂ ರೆಕ್ಟಿಫೈ ಮಾಡಬೇಕಾಗಿತ್ತು. ಅವರ ಕರ್ತವ್ಯ ಪ್ರಜ್ಞೆಯ ಬಗ್ಗೆ ಅವರಲ್ಲಿ ಅರಿವನ್ನು ಮೂಡಿಸಬೇಕಾಗಿತ್ತು. ನೀವು ವೇಗವಾಗಿ ಬರುತ್ತೀರಿ. ಅವರು ಹಾಗೆ ಬರುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಇದು ತುಂಬಾ ಬೇಸರ ಮಾಡತಕ್ಕ ಸಂಗತಿ.

ಶ್ರೀ ಚಂದ್ರಕಾಂತ್ ಜೆ. ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ತಾವು ಅವರ ಪರವಾಗಿ ಮಾತ ನಾಡುತ್ತಿರುವುದರಿಂದ, ಇವರು ಈ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದು ಬರುವುದು ಬೇಡ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನಾವುಗಳು ಹೊಸ ಸದಸ್ಯರುಗಳು. ತಮ್ಮಿಂದ ನಾವು ಬಹಳವಾಗಿ ತಿಳಿದುಕೊಳ್ಳಬೇಕಾದುದು ಇದೆ. ಆಡಳಿತ ಪಕ್ಷದವರಿಗೆ ಸದನದಲ್ಲಿ ಪಾಲುಗೊಳ್ಳಲು ಆಗುವುದಿಲ್ಲ, ಆದ್ದರಿಂದ ಅವರು ಇಲ್ಲಿಗೆ ಬರುತ್ತಿಲ್ಲವೆಂದು ತಾವು ಹೇಳಿದಿರಿ. ಹಾಗಾದರೆ ಅವರಿಗೇನಾದರೂ ರಿಯಾಯಿತಿ ಇದೆಯೇ? ಅದನ್ನಾದರೂ ನಾವು ತಿಳಿದುಕೊಳ್ಳೋಣ.

ಅಧ್ಯಕ್ಷರು : ರಿಯಾಯಿತಿಯಲ್ಲ, ತಾವು ಕುಳಿತುಕೊಳ್ಳಿ. ಎಲ್ಲರೂ ಮಾತನಾಡುವವರೇ ಶೂನ್ಯವೇಳೆ ನಿಮಗೇ ಬೇಕು, ಗಮನಸೆಳೆಯುವ ಸೂಚನೆಯೂ ನಿಮಗೇ ಬೇಕು, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ನಿಮಗೇ ಬೇಕು, ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲು ನಿಮಗೆ ಸಮಯಬೇಕು, ಎಲ್ಲಾ ಕಡೆಗಳಲ್ಲೂ ನಿಮಗೆ ಅವಕಾಶ ಬೇಕು, ಆಗ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ಆಗ ನ್ಯಾಚ್ಯುರಲಿ ಆಡಳಿತ ಪಕ್ಷದ ಸದಸ್ಯರಿಗೆ ಆಸಕ್ತಿ ಕಡಿಮೆಯಾಗುತ್ತದೆ. ತಾವು ವಾದ ಮಾಡಬೇಡಿ. ಒಂದು ನಿಮಿಷ ಕುಳಿಕುಕೊಳ್ಳಿ. ತಾವು ಮಧ್ಯಾಹ್ನ ಬನ್ನಿ ಯಾರ್ಯಾರು ಎಷ್ಟೆಷ್ಟು ಸಮಯ ತೆಗೆದುಕೊಂಡಿದ್ದಾರೆ, ಅವರೆಷ್ಟು ಸಮಯ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಪ್ರೊಸೀಡಿಂಗ್ಸ್‌ನ್ನು ತೆಗೆಸಿ ತೋರಿಸುತ್ತೇನೆ. ಯಾರ್ಯಾರು ಎಷ್ಟೆಷ್ಟು ಸಮಯ ತೆಗೆದುಕೊಂಡಿದ್ದಾರೆ ಎಂಬುದನ್ನು ತೋರಿಸುತ್ತೇನೆ. ನಾನು ಮಂತ್ರಿಗಳಿಗೆ ವಕಾಲತ್ತನ್ನು ಹಾಕುತ್ತಿಲ್ಲ. ಆ ಭಾಗದ ಸದಸ್ಯರು ಹೆಚ್ಚು ಸಕ್ರೀಯವಾಗಿ ಭಾಗವಹಿಸದಿರುವುದಕ್ಕೆ ಕಾರಣವಿದೆ. ಪಕ್ಷವನ್ನು ವಹಿಸಿ ಮಾತನಾಡುತ್ತಿದ್ದೇನೆಂದರೆ ಹೇಗೆ? ನನ್ನಷ್ಟು ಸರ್ಕಾರವನ್ನು ತಾಕೀತು ಮಾಡಿರುವವರು ಯಾರೂ ಇಲ್ಲ. ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿ. ನನ್ನಷ್ಟು ಕಠಿಣವಾಗಿ ಹೇಳುವ ಅಧ್ಯಕ್ಷ ನಿಮಗೆ ಸಿಗುವುದಿಲ್ಲ.

ಶ್ರೀ .ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಹಾಗಾದರೆ ನಾವು ಶೂನ್ಯ ವೇಳೆಯಲ್ಲಿ ಮಾತನಾಡುವುದು, ಗಮನಸೆಳೆಯುವ ಸೂಚನೆಗಳನ್ನು ಕೊಡುವುದು, ಈ ಸಭೆಯಲ್ಲಿ ಭಾಗವಹಿಸುವುದು ಅಪರಾಧವೇ ?

ಅಧ್ಯಕ್ಷರು : ನಿಮ್ಮನ್ನು ಮಾತನಾಡಬೇಡಿ ಎಂದು ಹೇಳಲಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ನಾವು ಇಲ್ಲಿ ಮಾತನಾಡುವುದು ಅಪರಾಧವೇ ?

ಅಧ್ಯಕ್ಷರು : ನಿಮಗೆ ದೇವರು ಸರಿಯಾಗಿ ಅರ್ಥ ಮಾಡಿಕೊಳ್ಳುವ ಶಕ್ತಿಯನ್ನು ಕೊಟ್ಟಿಲ್ಲ. ನಾನು ಅಸಹಾಯಕ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅರ್ಥ ಮಾಡಿಕೊಳ್ಳುವ ಶಕ್ತಿ ದೇವರು ಕೊಟ್ಟಿದ್ದಾನೋ ಬಿಟ್ಟಿದ್ದಾನೋ ನನಗೆ ಗೊತ್ತಿಲ್ಲ.

(ಗೊಂದಲ)

MR. SPEAKER : You should understand what I meant. If this is the way your members behave. I will withdraw myself.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಈ ರೀತಿ ಮಾತನಾಡಿದರೆ ನಮಗೆ ಬಹಳ ನೋವಾಗುತ್ತದೆ.

(ಗೊಂದಲ)

MR. SPEAKER : Please understand what I say. ಅವರಿಗೆ ಅರ್ಥವಾಯಿತೆ? ಮಾತುಮಾತಿಗೆ ಮಾತನಾಡುತ್ತಾರೆ. There should be a limit.

ಶ್ರೀ ಕೆ.ಎಸ್. ಈಶ್ವರಪ್ಪ : ನಾವೇನು ತಪ್ಪು ಮಾಡಿದ್ದೇವೆ ಹೇಳಿ. ಹಾಗಾದರೆ ನಮ್ಮ ಸದಸ್ಯರು ಮಾತನಾಡುವುದು ತಪ್ಪೇ? ನಾವು ಇಲ್ಲಿ ಭಾಗವಹಿಸುವುದು ತಪ್ಪೇ?

ಅಧ್ಯಕ್ಷರು : ಮಾತನಾಡಲು ಆಗದಿದ್ದರೆ ಕುಳಿತುಕೊಳ್ಳಿ. ಮೊದಲು ತಾವು ಮಾತನಾಡುವುದನ್ನು ಕಲಿತುಕೊಳ್ಳಿ. Did you observe what Mr. Sadananada gowda said? ಮೊದಲು ನಾನೇನು ಹೇಳಿದ್ದೇನೆ ಅದನ್ನು ಅರ್ಥ ಮಾಡಿಕೊಳ್ಳಿ, ಅನಂತರ ಮಾತನಾಡಿ.

(ಗೊಂದಲ)

MR. SPEAKER : Please sit down. What Mr. Sadananda Gowda said? Mr. Y. Ramakrishna. Can I get the records? Do you want that to remain on the records?

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕಳುಹಿಸಬಹುದು. ಎಷ್ಟು ಗಮನಸೆಳೆಯುವ ಸೂಚನೆಗಳನ್ನು ಬೇಕಾದರೂ ಕಳುಹಿಸಿಕೊಡಬಹುದು. ಅವರು ಕಳುಹಿಸದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು : ನಾನು ವಾಸ್ತವ ಅಂಶವನ್ನು ತಿಳಿಸುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಆ ಪಕ್ಷದವರು ತಂದಿರುವ ಗಮನಸೆಳೆಯುವ ಸೂಚನೆಗಳಾಗಲಿ ಇತರೇ ವಿಷಯಗಳನ್ನಾಗಲಿ ನಾವು ಬೇಡವೆಂದು ಹೇಳಿದ್ದೇವೆಯೇ? we are glad to join them.

MR. SPEAKER : Please listen to me. ಈ ಸಲ ವಿರೋಧ ಪಕ್ಷದವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿ ಬಂದಿದ್ದೀರಿ ಎಂದು ಹೇಳಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನನಗೆ ಮಾತನಾಡಲು ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ನಾನು ಮಾತನಾಡಬೇಕು. ವಿರೋಧ ಪಕ್ಷದವರು ಹೆಚ್ಚಿಗೆ ಅವಕಾಶಗಳು ಸಿಗುತ್ತಿರುತ್ತದೆ, ಆದ್ದರಿಂದ ಆ ಭಾಗದ ಸದಸ್ಯರಿಗೆ ಸಕ್ರೀಯವಾಗಿ ಪಾಲುಗೊಳ್ಳಲು ಅವಕಾಶಗಳು ಸಿಗುವುದಿಲ್ಲ. ಮಂತ್ರಿಗಳಾದವರಿಗೆ ಜವಾಬ್ದಾರಿ ಇರುತ್ತದೆ ಆದ್ದರಿಂದ ಅವರು ಉತ್ತರವನ್ನು ಕೊಡುತ್ತಾರೆ. ಆದ್ದರಿಂದ ಆ ಭಾಗದ ಸದಸ್ಯರಿಗೆ ಹೆಚ್ಚು ಸಕ್ರೀಯವಾಗಿ ಇಲ್ಲಿ ಪಾಲುಗೊಳ್ಳಲು ಆಸಕ್ತಿ ಕಡಿಮೆಯಾಗುವುದು ಸಹಜವೆಂದು ಹೇಳಿದರೆ, ನೀವೇನು ಅರ್ಥ ಮಾಡಿಕೊಳ್ಳುವುದು? ನಿಮ್ಮ ಹಕ್ಕಿಲ್ಲವೆಂದು ನಾನು ಹೇಳಿದ್ದೇನೆಯೇ? ನಿಮ್ಮ ಹಕ್ಕು ಇಲ್ಲವೆಂದು ನಾನು ಹೇಳಿದ್ದೇನೆಯೇ? ನಾನಾಗಿ ನಾನೇ ನಿಮಗೆ ಹೆಚ್ಚಿನ ಅವಕಾಶ ಕೊಡುತ್ತಿದ್ದೇನೆ. ಕಾರಣ ಜನರು ನಿಮ್ಮನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಳುಹಿಸಿಕೊಟ್ಟಿದ್ದಾರೆ. ಸದಾನಂದಗೌಡರು ಹೇಳಿರುವುದು ಕಡತಕ್ಕ ಹೋಗಿದೆಯಲ್ಲಾ Did you observe what he said? Mr. Byre Gowda, please be seated. I will do one thing. I will take a challenge, I will get the proceedings of the last two years. You please sit down Mr. Sadananda Gowda. Don't try my patience. You please get the procedings of the last two years.

ಶ್ರೀ ವೈ. ರಾಮಕೃಷ್ಣ : ಅದರ ಬಗ್ಗೆ ವಾದವಿವಾದವಿಲ್ಲ. ಅದನ್ನು ನಾವು ಇಲ್ಲವೆಂದು ಹೇಳಲಿಲ್ಲ.

MR. SPEAKER : You please get the proceedings of the last two years. Do you want a more reasonable Speaker than this?

ಶ್ರೀ ಎಂ. ಶ್ರೀನಿವಾಸ್ : ತಾವು ಇಷ್ಟಕ್ಕೆ ಕೋಪ ಮಾಡಿಕೊಳ್ಳಬಾರದು.

ಅಧ್ಯಕ್ಷರು : ತಮ್ಮ ಸದಸ್ಯರು ಒಂದನ್ನು ತಿಳಿದುಕೊಳ್ಳಬೇಕು. ಏನು ಹೇಳಬೇಕಾಗಿದ್ದರೂ ಹೇಳಬಹುದು. ಪೆದರಿಸುವುದನ್ನು ಬಿಡಬೇಕು. ಆಪಾದನೆ ಮಾಡುವುದನ್ನು ಬಿಡಬೇಕು. ನನ್ನ ಮೇಲೆ ಸದಾನಂದಗೌಡರು ಆಪಾದನೆ ಮಾಡಿದ್ದಾರೆ. You please see that. I don't want to sit in this Chair. You conduct the proceedings yourself. I don't want to sit here. Thank you verymuch.

(ಅಧ್ಯಕ್ಷರು ಸದನದಿಂದ ನಿರ್ಗಮಿಸಿದರು.)

ಸದನವು ಪುನಃ 11.22ಕ್ಕೆ ಸಮಾವೇಶಗೊಂಡಿತು.

(ಮಾನ್ಯ ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ ಮಾಮನಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇಂದು ಮುಂಜಾನೆ 10 ಗಂಟೆಗೆ ಸದನ ಸೇರಿತು, ಆದರೆ ಸದನದಲ್ಲಿ ಆಡಳಿತ ಪಕ್ಷದವರು ಬಹಳ ಕಡಿಮೆ ಇದ್ದಾರೆಂದು...

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಮೇಲೆ ನೀವು ಏತಕ್ಕೆ ಹೇಳುತ್ತೀರಿ?

ಉಪಾಧ್ಯಕ್ಷರು : ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡಿದ್ದೇನೆ.

(ಸದನವು ಬೆಳಿಗ್ಗೆ 11.25ಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧ ಗಂಟೆಯ ನಂತರ ಸೇರಲು ತೀರ್ಮಾನಿಸಿತು.)

ಸದನವು 1.20 ಗಂಟೆಗೆ ಪುನಃ ಸಮಾವೇಶಗೊಂಡಿತು.

ವಿಧಾನ ಸಭಾ ಅಧ್ಯಕ್ಷರಾದ (ಶ್ರೀ ರಮೇಶ್ ಕುಮಾರ್) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

+ಶ್ರೀ ಪಿಚ್.ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಬೆಳಿಗ್ಗೆ ಒಂದು ಘಟನೆಯು ಈ ಸದನದಲ್ಲಿ ಸಂಭವಿಸಿದೆ. ಆ ಘಟನೆಯಿಂದ ಸಭಾಧ್ಯಕ್ಷರ ಮುಖಾಂತರ ಉಳಿದವರಲ್ಲಿ ನಾನು ವಿನಂತಿಸಿಕೊಳ್ಳುತ್ತಿರುವುದೇನೆಂದರೆ, ಒಂದನೆಯದು, ಸಭಾಧ್ಯಕ್ಷರ ಮನಸ್ಸು ನೊಂದಿದೆ. ಅವರದು ಸ್ವಲ್ಪ ಸೂಕ್ಷ್ಮ ಸ್ವಭಾವ. ಅಧ್ಯಕ್ಷರು ಅವರ ಮನೆಗೆ ಬೇರೆ ಗಾಡಿಯಲ್ಲಿ ಹೋಗಿ, ಊರಿಗೆ ತಮ್ಮ ಶ್ರೀಮತಿಯವರೊಂದಿಗೆ ಹೋಗಲು ತಮ್ಮ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಳ್ಳುತ್ತಿದ್ದರು ಜೊತೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನೂ ಕಳುಹಿಸಿಯೂ ಆಗಿತ್ತು. ಈ ಮನೆಯಲ್ಲಿ ಮತ್ತು ಲೋಕಸಭೆಯಲ್ಲಿ ನನಗೆ ಸುಮಾರು ವರ್ಷಗಳ ಅನುಭವವಿದೆ. ಸಾಮಾನ್ಯವಾಗಿ ನಾನು ಕಂಡ ಮಟ್ಟಿಗೆ ಸದಸ್ಯರ ಹಕ್ಕನ್ನು ಎತ್ತಿ ಹಿಡಿಯತಕ್ಕಂಥ ಕಾರ್ಯದಲ್ಲಿ ಇಷ್ಟೊಂದು ಮುತುವರ್ಜಿ ವಹಿಸತಕ್ಕಂಥ ಅಧ್ಯಕ್ಷರನ್ನು ನಾನು ಕಂಡಿಲ್ಲ. ನಾವು ಅದನ್ನು ಮೆಚ್ಚಿಕೊಳ್ಳಬೇಕಾಗುತ್ತದೆ ಮತ್ತು ಇರತಕ್ಕಂಥಾದ್ದನ್ನು ಇದ್ದ ಹಾಗೆ ಹೇಳಬೇಕಾಗುತ್ತದೆ. ಈ ಅಧ್ಯಕ್ಷರ ಅವಧಿಯಲ್ಲಿ ಜೀರೋ ಅವರ್ ಕೂಡ ಎತ್ತತಕ್ಕಂಥ ವಿಚಾರಗಳಿಗೆ ಅನೇಕ ಸಾರಿ ಸರ್ಕಾರದಿಂದ ಉತ್ತರವೇ ಬರುವುದಿಲ್ಲ. ಆದರೆ, ಇಲ್ಲಿ ಪರಿಸ್ಥಿತಿ ಬೇರೆ ತರಹವೇ ಇವೆ. ಇಷ್ಟೊಂದು ರೀತಿಯಲ್ಲಿ ಸದಸ್ಯರ ಪರವಾಗಿ ನಾನು ಇದ್ದರೂ ಸಹ ತಿಳಿದುಕೊಳ್ಳುವುದಿಲ್ಲವಲ್ಲಾ ಎಂದು ಅಧ್ಯಕ್ಷರಿಗೆ ಅನಿಸಿದೆ. ಸರ್ಕಾರದಿಂದ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ತರಿಸಲು ಪ್ರಯತ್ನ ಮಾಡುತ್ತಾರೆ. ಇಲ್ಲಿ ಹೊಸಬರು ಸದಸ್ಯರಿದ್ದಾರೆ. ಅವರುಗಳಿಗೂ ಒಂದು ಕಿವಿ ಮಾತು ಹೇಳಬೇಕಾಗುತ್ತದೆ. 1967-71ರ ಅವಧಿಯಲ್ಲಿ ನಾನೂ ಮತ್ತು ವಾಟಾಳರೂ ಸದಸ್ಯರಾಗಿದ್ದೆವು. ನಾವು ಹೊಸಬರಾಗಿದ್ದಾಗ ಮಾಡುತ್ತಿದ್ದ ಗಲಾಟೆಯನ್ನು ಬೇರೆ ಯಾರೂ ಮಾಡುತ್ತಿರಲಿಲ್ಲ.

ಕೆಲವು ಸಂದರ್ಭಗಳಲ್ಲಿ ವಾಟಾಳ್‌ರವರು ಮಾಡುತ್ತಿದ್ದ ಗಲಾಟೆಯಿಂದ ಮಾರ್ಷಲ್‌ರವರು ಬಂದು ಅವರ ಭುಜವನ್ನು ಹಿಡಿದು ಹೊರಗೆ ಎಳೆದುಕೊಂಡು ಹೋಗುವಾಗ ನಾವು ವಾಟಾಳ್‌ರ ಕಾಲು ಹಿಡಿದು ಒಳಕ್ಕೆ ಎಳೆಯುತ್ತಿದ್ದೆವು. ಅಷ್ಟೆಲ್ಲಾ ಗಲಾಟೆ ನಾವು ಮಾಡುತ್ತಿದ್ದರೂ ಸಹ ಅಧ್ಯಕ್ಷರ ಪೀಠದ ವಾಗ್ದಾದಕ್ಕೆ ಇಳಿಯುತ್ತಿರಲಿಲ್ಲ. ಆ ಪೀಠಕ್ಕೆ ರಿಫ್ಲೆಕ್ಷನ್ ಬರುವ ರೀತಿಯಲ್ಲಿ ನಾವು ಮಾತನಾಡುತ್ತಿರಲಿಲ್ಲ ಆಕಸ್ಮಾತ್ ಆಗಿ ಹೊಸ ಸದಸ್ಯರು ಗೊತ್ತಿಲ್ಲದೆ ಏನಾದರೂ ಮಾತನಾಡಿದರೆ, ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಅಥವಾ ಸೀನಿಯರ್ ಮಿನಿಸ್ಟರ್‌ಗಳು ಎದ್ದು ನಿಂತು ಆ ಮಾತುಗಳು ಕಡತದಲ್ಲಿ ಹೋಗದ ಹಾಗೆ ನೋಡಿಕೊಳ್ಳುತ್ತಿದ್ದರು. ಹಿಂದೆಯೂ ಕೆಲವು ಸದಸ್ಯರುಗಳು ಹೋಗದ ಹಾಗೆ ಏನಾದರೂ ಮಾತನಾಡಿದ್ದು ಉಂಟು, ಅದಕ್ಕೆ ಅವರು ವಿಷಾದ ಬಾಯಿ ತಪ್ಪಿ ಏನಾದರೂ ಮಾತನಾಡಿದ್ದು ಉಂಟು, ಅದಕ್ಕೆ ಅವರು ವಿಷಾದ ವ್ಯಕ್ತಪಡಿಸಿ ಅಲ್ಲಿಗೆ ಅದನ್ನು ಮುಕ್ತಾಯ ಮಾಡಲಾಗುತ್ತಿತ್ತು. ಇಲ್ಲಿ ನಮ್ಮ ಪಕ್ಷದ ಸದಸ್ಯರೊಬ್ಬರು ಆಡಿದಂಥ ಮಾತು, ಆ ಪ್ರೊಸೀಡಿಂಗ್ಸ್‌ನ ನಾನು ಇಲ್ಲಿ ಇಟ್ಟುಕೊಂಡಿದ್ದೇನೆ, ಅದನ್ನೆಲ್ಲಾ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಸದಾನಂದ ಗೌಡರು ಹೊಸ ಸದಸ್ಯರಾಗಿ ಬಂದಿದ್ದಾರೆ. ಅವರಿಗೆ ಅನುಭವ ಇಲ್ಲ. ಅದಕ್ಕಾಗಿ ಸಭಾಕ್ಷದ್ಯರೇ, ಅವರ ಪರವಾಗಿ ನಾನು ಇದಕ್ಕೆ ವಿಷಾಧ ವ್ಯಕ್ತಪಡಿಸುತ್ತೇನೆ. ಆ ಪದ ಕಡತಕ್ಕೆ ಹೋಗುವುದು ಬೇಡ. ಈ ಸಭೆ ಇಡೀ ನಮ್ಮ ರಾಷ್ಟ್ರದಲ್ಲಿರತಕ್ಕಂಥ ಎಲ್ಲಾ ವಿಧಾನ ಸಭೆಗಳಿಗಿಂತ ಭಿನ್ನ. ಇದುವರೆಗೂ ನಾವು ಯಾವುದೇ ಹಂತದಲ್ಲೂ ಅಧ್ಯಕ್ಷರ ಪೀಠಕ್ಕೆ ಅವಮಾನ ವಾಗತಕ್ಕಂಥ ರೀತಿಯಲ್ಲಿ ನಡೆದುಕೊಂಡಿಲ್ಲ ಹಾಗೂ ಅಧ್ಯಕ್ಷರ ಪೀಠದ ಮೆಟ್ಟಿಲ ಮೇಲೂ ಹತ್ತಿಲ್ಲ. ಬೇರೆ ವಿಧಾನ ಸಭೆಗಳಲ್ಲಿ ಏನೇನೋ ಆಗಿವೆ, ಅಧ್ಯಕ್ಷರನ್ನು ಎಳೆದು ಹಾಕುವ ಮಟ್ಟಕ್ಕೂ ಹೋಗಿದ್ದಾರೆ. ನಮ್ಮದು ಏನಿದ್ದರೂ ಸರ್ಕಾರದ ವಿರುದ್ಧ ಟೀಕೆ ಟಿಪ್ಪಣಿ ಮಾಡುವುದೇ ಆಗಿದೆ. ವಾಸ್ತವಿಕವಾಗಿ ನಮ್ಮ ಕಡೆಯ ಸದಸ್ಯರುಗಳಿಗೇ ಹೆಚ್ಚಿನ ಕಾಲಾವಕಾಶ ಒದಗಿಸಿಕೊಡಲಾಗುತ್ತಿದೆ. ಇದಕ್ಕೆ ಸರ್ಕಾರದವರು ಕೂಡ ಸಹಕರಿಸುತ್ತಿದ್ದಾರೆ. ಈ ರೀತಿ ಸಹಕರಿಸುವುದು ಅವರ ಕರ್ತವ್ಯ ಕೂಡ ಆಗಿದೆ.

ಪರಿಸ್ಥಿತಿಯ ಏತಕ್ಕೆ ಹೀಗಾಗುತ್ತದೆ ಅಂದರೆ, ನಾನು ಆಳುವ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವುಗಳು ಸಭೆಯ ಬಗ್ಗೆ ಸ್ವಲ್ಪ ಆಸ್ಥೆ ವಹಿಸಬೇಕು. ಮಾನ್ಯ ಖಿರ್ಗಿಯವರು ವ್ಯಾಲಿಡ್ ಪಾಯಿಂಟ್ ಕೇಳಿದ್ದಾರೆ ಈ ಕಡೆಯವರೇ ಕುಳಿತುಕೊಂಡು, ಇವರೇ ಸೇರಿಕೊಂಡು ಕೋರಂ ಮಾಡಿಕೊಂಡು ಇವರೇ ಮಾತನಾಡಿಕೊಂಡು ಹೋಗುವುದಾದರೆ, ಸಭೆಗೆ ಏಕೆ ಬರಬೇಕು ಈ ಕಡೆಯವರೇ ಸೇರಿ ಕೋರಂ ಮಾಡಿಕೊಂಡು, ಈ ಕಡೆಯವರೇ ಮಾತನಾಡುವುದಾದರೆ ಅಧ್ಯಕ್ಷರು ಏನು ಮಾಡಬೇಕು? ಆದ್ದರಿಂದ ಇದು ಅಧ್ಯಕ್ಷರನ್ನೂ ಪೇಚಿಗೆ ತರತಕ್ಕಂಥ ವಿಚಾರ. ಸರಕಾರದವರು ಈ ಬಗ್ಗೆ ಆಸ್ಥೆವಹಿಸಿ, ಕೇವಲ ಕೋರಂ ಇರುವುದು ಅಷ್ಟೇ ಅಲ್ಲ, ಎಲ್ಲರೂ ಸೇರಿ ಕೋರಂ ಆಗಬೇಕಾದರೆ ಮಂತ್ರಿಗಳಿರಬೇಕಾಗುತ್ತದೆ, ಸದಸ್ಯರುಗಳಿರಬೇಕಾಗುತ್ತದೆ, ಹೀಗೆ ನೀವುಗಳಿಲ್ಲದಿದ್ದುದು ಇಂದಿನ ಇಷ್ಟೆಲ್ಲಾ ಅವಾಂತರಗಳಿಗೆ ಕಾರಣವಾಯ್ತು. ಇಷ್ಟು ಹಗರಣವಾಯಿತು. ನಾನು ಮತ್ತೊಮ್ಮೆ ಹೇಳಿಕೊಳ್ಳುತ್ತೇವೆ ಈ ಸಭೆಗೆ ತನ್ನದೇ ಆದಂಥ ಘನತೆ-ಗೌರವವು ಈ ರಾಷ್ಟ್ರದಲ್ಲಿದೆ. ಅದನ್ನು ನಾವು ಕಾಪಾಡಿಕೊಂಡು ಬಂದಿದ್ದೇವೆ. ಯಾವಾಗಲೂ ನಾವು ಒಂದು ಹಂತವನ್ನು ಮೀರಿ ಹೋಗಿಲ್ಲ

ಸಭಾಗೌರವವನ್ನು ಉಳಿಸಿಕೊಂಡು, ಸಭಾಧ್ಯಕ್ಷರ ಪೀಠಕ್ಕೆ ನಾವು ಏನು ಮರ್ಯಾದೆಯನ್ನು ಕೊಡಬೇಕೋ ಅದಕ್ಕೆ ಯಾವೊತ್ತು ಲೋಪಬಾರದ ಹಾಗೆ ನೋಡಿಕೊಂಡು ಬಂದಿದ್ದು ಅದನ್ನು ನಾವು ಕಾಪಾಡಿಕೊಂಡು ಹೋಗಬೇಕಾಗುತ್ತದೆ. ಆ ಬಗ್ಗೆ ನನ್ನ ಸಹಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾವು ಎಷ್ಟೇ ಜೋರಾಗಿ ಮಾತನಾಡಿದರೂ ಕೂಡ ಅದು ಅಧ್ಯಕ್ಷಪೀಠದ ಮೇಲೆ ರಿಫ್ಲೆಕ್ಷನ್ ಆಗಬಾರದು. ಅಂಥ ರೀತಿಯಲ್ಲಿ ಒಂದು ಮಾತನ್ನು ಕೂಡ ನಾವು ಆಡಬಾರದು. ಬೇರೆ ರೀತಿಯಲ್ಲಿ ನಾವು ಜಗಳ ಮಾಡಿಕೊಳ್ಳೋಣ. ಏಕೆಂದರೆ ಮಾನ್ಯ ಅಧ್ಯಕ್ಷರು ಆ ಕಡೆ, ಈ ಕಡೆ ಎಂದೂ ನೋಡಿಲ್ಲ. ಅವರು ಸದಸ್ಯರುಗಳ ಹಕ್ಕನ್ನು ಎತ್ತಿಹಿಡಿಯಲು ಯಾವಾಗಲೂ ಪ್ರಯತ್ನಪಟ್ಟಿದ್ದಾರೆ. ಅದು ಬಹಳ ಮೆಚ್ಚತಕ್ಕಂಥ ಕಾರ್ಯವಾಗಿದೆ. ಅವರ ಮನಸ್ಸಿಗೆ ನೋವು ಆಗಿದ್ದು ಅದು ಎಷ್ಟರಮಟ್ಟಿನ ನೋವು ಎಂಬುದು ನನಗೆ ಗೊತ್ತು. ಅವರು ಬರಲು ಒಪ್ಪದೇನೇ ಕುಳಿತಿದ್ದರು. ಅದಕ್ಕೆ ನಾವು ಕೆಲವರಾದರೂ ಅಸೆಂಬ್ಲಿಗೆ ರಾಜೀನಾಮೆ ಕೊಟ್ಟು ಹೋಗುತ್ತೇವೆ, ನೀವು ಬರದೇ ಹೋದರೆ ಸರಿಯಾಗುವುದಿಲ್ಲ ಸಮ್ಮಂಥವರೆಲ್ಲಾ ಇದ್ದು ನೀವು ಇಷ್ಟರಮಟ್ಟಿಗೆ ನೋವು ಮಾಡಿಕೊಳ್ಳುವುದಾದರೆ ನಾವು ಏಕೆ ಇಲ್ಲಿ ಇರಬೇಕು? ಹಾಗಿದ್ದಲ್ಲಿ ನಾವೂ ರಾಜೀನಾಮೆ ಕೊಡುತ್ತೇವೆ. ನಿಮ್ಮ ಅಪೇಕ್ಷೆ ಅದು ಇದ್ದಲ್ಲಿ ಹೇಳಿ, ಇಲ್ಲವಾದರೆ ತಾವು ಬರಬೇಕೆಂದು ಹೇಳುವಾಗ ಅವರು ಶ್ರೀಮತಿಯವರು ಆಗಲೇ ಹೊರಟು ಹೋಗಿದ್ದರು. ನಾವು ಅಲ್ಲಿಗೆ ಫೋನ್ ಮಾಡಿಸಿ, ಅವರಿಗೆ ಈ ಮನೆಯಲ್ಲಿನ ಸಾಮಾನುಗಳನ್ನು ತರಲು ಯಾರನ್ನೂ ಕಳುಹಿಸಬೇಡಿ, ದಯಮಾಡಿ ನೀವೂ ಬನ್ನಿ ಎಂದು ಅವರನ್ನು ವಿನಂತಿಸಿಕೊಂಡೆವು. ನಮ್ಮ ಮಾತಿಗೆ ಮನ್ನಣೆ ಕೊಟ್ಟು ಅವರೂ ತಮ್ಮ ನಿರ್ಧಾರವನ್ನು ಬದಲಿಸಿ ಈಗ ನಮ್ಮಲ್ಲಿ ಬಂದಿದ್ದಾರೆ. ಆದರೆ ಅವರು ಮನಸ್ಸಿಗೆ ಬಹಳ ನೊಂದು ಕೊಂಡಿದ್ದಾರೆ. ಅದನ್ನು ನಾನು ಇಲ್ಲಿ ಹೇಳಿಲಿಕ್ಕಾಗುವುದಿಲ್ಲ. ಅವರ ಸ್ವಭಾವವೇ ಬಹಳ ಸೂಕ್ಷ್ಮವಾದುದು. ಅವರು ಇಷ್ಟೊಂದು ಮನಸ್ಸಿಗೆ ನೋವು ಮಾಡತಕ್ಕಂಥಾದ್ದು ಇಲ್ಲ. ಸಂದರ್ಭಾನುಸಾರವಾಗಿ ಅಲ್ಲೊಂದು ಇಲ್ಲೊಂದು ಮಾತು ಬರುತ್ತದೆ. ಅದನ್ನೆಲ್ಲಾ ಅವರು ಹೊಟ್ಟೆಗೆ ಹಾಕಿಕೊಳ್ಳಬೇಕು. ನಮ್ಮ ಹೊಸ ಸಹಸದಸ್ಯರನ್ನು ತಿದ್ದಿಕೊಳ್ಳಬೇಕಾಗುತ್ತದೆ. ಇವೊತ್ತಿನ ಘಟನೆಯಿಂದಾಗಿ ತಮಗೆ ನೋವಾಗಿದ್ದರೆ ನಮ್ಮವತಿಯಿಂದ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ತಾವುಗಳು ನಮ್ಮ ಮಾತಿಗೆ ಮರ್ಯಾದೆಯನ್ನು ಕೊಟ್ಟು ಬಂದಿದ್ದೀರಿ. ತಾವುಗಳು ನಮ್ಮ ಈ ಸಭೆಗೆ ಶೋಭೆಯನ್ನು ತಂದವರು. ಏಕೆಂದರೆ ಯಾರ್ಯಾರೋ ಅಧ್ಯಕ್ಷರಾಗಿದ್ದರೆ ಈ ಪೀಠಕ್ಕೆ ಇಷ್ಟೊಂದು ಮಹತ್ವವೂ ಬರುತ್ತಿರಲಿಲ್ಲ, ಸಭೆಗೆ ಇಷ್ಟೊಂದು ಶೋಭೆಯೂ ಬರುತ್ತಿರಲಿಲ್ಲ. ಆ ಒಂದು ವಿಚಾರದ ಅರಿವು ನಮಗೆ ಆಗಿದೆ ಎಂಬುದನ್ನು ತಮ್ಮಲ್ಲಿ ನಿವೇದಿಸಿಕೊಂಡು, ಮತ್ತೊಮ್ಮೆ ಕಾರಣಾಂತರಗಳಿಂದ ಮನಸ್ಸಿಗೆ ನೋವು ಮಾಡಿಕೊಳ್ಳದೇ ಈ ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಹೋಗಿ ಎಂದು ವಿನಂತಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ನಂಜೇಗೌಡರು ನಡೆದಂಥ ಘಟನೆಗಳ ಬಗ್ಗೆ ಮಾತನಾಡಿದ್ದಾರೆ. ಅವರು ಆಡಿದಂಥ ಮಾತುಗಳಿಗೆ ನನ್ನ ಸಂಪೂರ್ಣವಾದ ಬೆಂಬಲವಿದೆ. ಘಟನೆ ನಡೆದಾಗ ನಾನು ಕೂಡ ಇಲ್ಲಿದ್ದೆ. ನಾನು ಪದೇ ಪದೇ ಎದ್ದು ಅವರ ಪರವಾಗಿ ಕ್ಷಮೆ ಕೇಳಬೇಕೆಂದು ಅಪೀಲ್ ಮಾಡಿಕೊಳ್ಳುತ್ತಾ

ಇವೆ. ಆದರೆ ಮಾತುಗಳ ಘರ್ಷಣೆಯಲ್ಲಿ ಆ ಕಡೆಯವರು, ಈ ಕಡೆಯ ಸದಸ್ಯರುಗಳು ಮಾತನಾಡುವಾಗ ನಮ್ಮ ಅಪೀಲ್ ಹೆಚ್ಚಿನ ರೀತಿಯಲ್ಲಿ ಸದನದ ಗಮನಕ್ಕೆ ಬರಲಿಲ್ಲ. ನಾನೇ ಆಗ ಸ್ವಲ್ಪ ಜೋರಾಗಿ ಕೇಳಿಕೊಂಡಿದ್ದರೆ ಅಲ್ಲಿಗೇ ಈ ಘಟನೆ ನಿಂತು ಹೋಗುತ್ತಿತ್ತೋ ಏನೋ ಎಂದು ಈಗ ನನಗೆ ಅರಿವಾಗುತ್ತಾ ಇದೆ. ಇಂಥ ಘಟನೆ ನಡೆಯ-ಬಾರದಾಗಿತ್ತು. ಯಾವುದೋ ಒಂದು ಸಂದರ್ಭದಲ್ಲಿ ಇದು ನಡೆದು ಹೋಗಿದೆ. ಅದನ್ನು ತಾವುಗಳು ಮನಸ್ಸಿನಲ್ಲಿ ಇಟ್ಟುಕೊಳ್ಳಲಾರದೆ ಬಂದಿದ್ದೀರಿ. ನಾನೂ ಕೂಡ ನಮ್ಮ ಪರವಾಗಿ ಈ ಸಭೆಯ ಪರವಾಗಿ ತಮ್ಮಲ್ಲಿ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ಇಂಥ ಘಟನೆ ಮುಂದೆ ನಡೆಯ ಬಾರದು. ಅದೇ ರೀತಿಯಲ್ಲಿ ಯಾವುದೇ ನಮ್ಮ ಆಕ್ರೋಶ ಆಗಲೀ, ಸಿಟ್ಟಾಗಲೀ ತಮ್ಮ ಮೇಲೆ ಇಲ್ಲ. ಏತಕ್ಕೆಂದರೆ ನಮ್ಮೆಲ್ಲರ ಹಕ್ಕಿನ ರಕ್ಷಣೆ ಮಾಡತಕ್ಕಂಥ ಅಧಿಕಾರ ತಮಗೆ ಇದೆ. ಅದಕ್ಕಾಗಿ ನಾವು ಯಾವಾಗಲೂ ಸರಕಾರದ ಕಡೆಗೆ ನೋಡುವುದಿಲ್ಲ. ನಾವು ನಿಮ್ಮ ಕಡೆಗೆ ಯಾವಾಗಲೂ ನೋಡುತ್ತೇವೆ. ನಮಗೆ ಏನಾದರೂ ರಕ್ಷಣೆ ಸಿಗಬೇಕಾದರೆ ಅದು ನಿಮ್ಮಿಂದ ಮಾತ್ರ ಸಾಧ್ಯವೇ ಹೊರತು ಸರಕಾರದಿಂದಲ್ಲ. ಎಷ್ಟೋ ಸಾರಿ ಸರಕಾರಕ್ಕೂ ನಮಗೂ ಘರ್ಷಣೆ ಬರುತ್ತದೆ, ಮಾತುಗಳ ಚಕಮಕಿ ಬರುತ್ತದೆ, ಯಾವುದೇ ಕಾರ್ಯಕ್ರಮ ಅಥವಾ ಬೇರೆ ಯಾವುದೇ ಸಂಬಂಧಪಟ್ಟ ವಿಚಾರಗಳಲ್ಲಿ ಇದು ಬರುವುದು ಸಹಜವಾಗಿದೆ. ಇಂಥ ಒಂದು ಸಂದರ್ಭ ಯಾಕೆ ಬಂತು ಅಂದರೆ, ಸಭೆಯಲ್ಲಿ ಪ್ರಾರಂಭದಲ್ಲಿ ಕೇವಲ 7-8 ಜನರು ಮಾತ್ರ ಇದ್ದರು. ಅದರಲ್ಲಿ 4-5 ಜನ ಮಂತ್ರಿಗಳು ಮತ್ತು ಸದಸ್ಯರು 2-3 ಜನರು ಮಾತ್ರ ಇದ್ದರು. ಆ ಕಾರಣಕ್ಕಾಗಿ ನಾನು ಆ ಪ್ರಸ್ತಾಪ ಮಾಡಬೇಕಾಗಿ ಬಂತು. ಮಾನ್ಯ ಅಧ್ಯಕ್ಷರು ಬರುವುದಕ್ಕೆ ಮುಂಚೆ ಎಲ್ಲಾ ಸದಸ್ಯರು ಬಂದು ಕುಳಿತು ಗೌರವ ತೋರಿಸಬೇಕು. ಹಾಗೆಯೇ ವಿರೋಧ ಪಕ್ಷದವರೇ ಬಂದು ಇಲ್ಲಿ ಕೋರಂ ಮಾಡಬೇಕಾದರೆ ನೀವು ಇಲ್ಲಿ ಯಾಕೆ ಇರಬೇಕು ಎಂಬ ವಿಚಾರವನ್ನು ನಾನು ಸ್ವಲ್ಪ ಪ್ರಸ್ತಾಪ ಮಾಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಿಗೂ ಕೂಡ ಈ ಕಡೆಯ ಸಂಖ್ಯೆಯು ಸ್ವಲ್ಪ ಕಡಿಮೆ ಎಂಬ ಬಗ್ಗೆ ತಿಳಿದು ಅವರಿಗೂ ಸ್ವಲ್ಪ ಮುಜುಗರವಾಯಿತು. ಆ ಮಾತಿನಲ್ಲಿಯೇ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಂತರ ನೀವು ಅವರ ಕಡೆ ಮಾತನಾಡುತ್ತೀರಿ ಎಂಬ ಅರ್ಥದ ಮಾತುಗಳು ಬಂದು ಅವರ ಮನಸ್ಸಿಗೆ ನೋವು ಉಂಟಾಗತಕ್ಕ ರೀತಿಯಲ್ಲಿ ವಾತಾವರಣ ಸೃಷ್ಟಿಯಾಯಿತು ಎಂಬುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ ನಾನು ಕ್ಷಮೆ ಕೇಳಿಕೊಳ್ಳೋಣ ಎಂದು ಪದೇ ಪದೇ ಎದ್ದು ನಿಂತು ರಿಕ್ವೆಸ್ಟ್ ಮಾಡುತ್ತಾ ಇದ್ದೆ. ಆದರೂ ನಮ್ಮ ಅಪೀಲ್ ತಮಗೆ ಆಗ ಕೇಳಲಿಲ್ಲ. ಈಗ ತಮ್ಮ ಮನಸ್ಸಿಗೆ ಅಷ್ಟೊಂದು ನೋವಾದರೂ ಕೂಡ ಅದನ್ನು ಮರೆತು ಪೀಠವನ್ನು ಅಲಂಕರಿಸಿದ್ದೀರಿ. ತಾವುಗಳು ಈ ಸದನದ ಗೌರವವನ್ನು ಎತ್ತಿಹಿಡಿಯಬೇಕು, ಈ ಸದನದ ಸದಸ್ಯರಿಗೆ ಮಾರ್ಗದರ್ಶನವನ್ನು ಮಾಡಬೇಕು ಎನ್ನುವ ರೀತಿಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಬಂದು ಪೀಠವನ್ನು ಅಲಂಕರಿಸಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಮುಂದೆ ಇಂಥ ಘಟನೆಗಳು ನಡೆಯದ ರೀತಿಯಲ್ಲಿ ನಾವೆಲ್ಲರೂ ನೋಡಿಕೊಳ್ಳುತ್ತೇವೆ ಮತ್ತು ಎಲ್ಲಾ ಸದಸ್ಯರ ಪರವಾಗಿ ನಾನು ಕೇಳಿಕೊಳ್ಳುತ್ತೇನೆ, ಇಂಥ ಘಟನೆಗಳು ಮುಂದೆ ನಡೆಯಲು ನಾವು ಅವಕಾಶ ಮಾಡಿಕೊಡುವುದಿಲ್ಲ. ಯಾವುದೇ ಸಿಟ್ಟು, ಅಸಮಾಧಾನ ಇದ್ದಲ್ಲಿ ಸರಕಾರ ಮತ್ತು ನಮ್ಮ ನಡುವೆ ನಡೆಯಲಿ ಆಗಲಿ. ಅಧ್ಯಕ್ಷರ ಪೀಠಕ್ಕೆ ಅಗೌರವವಾಗುವ ಯಾವುದೇ ಸಂದರ್ಭಗಳನ್ನು ನಾವು

ಇನ್ನು ಮುಂದೆ ತಡೆಯುತ್ತೇವೆ ಎಂದು ಹೇಳುತ್ತಾ, ಪುನಃ ತಮ್ಮ ಮನಸ್ಸಿಗೆ ನೋವು ಉಂಟು ಮಾಡಿಕೊಳ್ಳದೆ ನಮ್ಮನ್ನು ಕ್ಷಮಿಸಬೇಕು. ತಮಗೆ ವಯಸ್ಸು ಚಿಕ್ಕದಿದ್ದರೂ ಕೂಡ ಅನುಭವವು ಜಾಸ್ತಿ ಇದೆ. ಎಲ್ಲರ ಜೊತೆಗೆ ಸೇರಿ ನಡೆದುಕೊಂಡ ಹಾಗೂ ಓದಿ ತಿಳಿದುಕೊಂಡ ಅನುಭವವು ತಮ್ಮಲ್ಲಿದೆ. ತಾವುಗಳು ಸದನವನ್ನು ಬಹಳ ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೀರಿ. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ತಮಗೆ ಎಷ್ಟೇ ನೋವಾಗಿದ್ದರೂ ಕೂಡ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಲಾರದೆ ಈ ಸದನವನ್ನು ಸುಗಮವಾಗಿ ನಡೆಸಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಅಪೀಲ ಮಾಡಿಕೊಳ್ಳುತ್ತಿದ್ದೇನೆ. ಇವೊತ್ತು ಒಂದೂವರೆ ಗಂಟೆಗೆ ನಾನು ಭೋಜನಕೂಟವನ್ನು ಏರ್ಪಡಿಸಿದ್ದೇನೆ. ಅಲ್ಲಿಗೆ ತಾವುಗಳು ಮತ್ತು ಸದಸ್ಯರುಗಳೆಲ್ಲರೂ ಬಂದು ಸಂತೋಷಗೊಳಿಸಬೇಕು.ಅಲ್ಲಿ ಈ ವಾತಾವರಣವೂ ತಿಳಿಯಾಗಬಹುದು. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾನು ಇವೊತ್ತು ಸದನಕ್ಕೆ ಬೇಗ ಬಂದಿದ್ದರೆ ಇಷ್ಟೆಲ್ಲಾ ಘಟನೆಗಳು ಆಗುತ್ತಿತ್ತೋ ಇಲ್ಲವೋ ಎಂದು ಅನ್ನಿಸುತ್ತದೆ. ಸದನವು 15 ನಿಮಿಷಗಳ ಕಾಲ ತಡವಾಗಿ ಸೇರಬಹುದೆಂಬ ಊಹೆಯಿಂದ 20 ನಿಮಿಷ ತಡವಾಗಿ ಬಂದೆ. ಪ್ರತಿದಿನವೂ ಕಾಲಕ್ಕೆ ಸರಿಯಾಗಿ ಬರುವವನು ಇವೊತ್ತೇ ತಡವಾಗಿ ಬಂದೆ. ಆದರೆ ಪರಿಸ್ಥಿತಿಯು ಇಲ್ಲಿ ಬೇರೆಯಾಗಿತ್ತು. ಬಂದ ತಕ್ಷಣ ವಿಷಯು ತಿಳಿದು ದಿಗಭ್ರಮೆ ಆಯಿತು. ಇಲ್ಲಿ ಒಂದು ರೀತಿಯಲ್ಲಿ ಮೋಡ ಕವಿದ ವಾತಾವರಣ ಉಂಟಾಗಿತ್ತು. ನಾನು ಈ ಸದನದಲ್ಲಿ ಮಾನ್ಯ ವೈಕುಂಠಬಾಳಿಗಾರವರ ಕಾಲದಿಂದ ಇದ್ದೇನೆ. ಆದರೆ ಆ ಸ್ಪೀಕರಗಳ ಜೊತೆಯಲ್ಲಿ ಭಾರಿ ರೀತಿಯ ಜಗಳ ಆಡಿದ್ದೇವೆ. ಜಗಳ ಅಂದರೆ ಹಾಗೆ ಹೀಗೆ ಅಲ್ಲ. ದಿನವೂ ನಮಗೂ ಸ್ಪೀಕರ್‌ಗೂ ಜಗಳ ಆದೂ ದಿನಗಟ್ಟಲೆ ನಡೆದಿದೆ. ಅವರು ಹೊರಗೆ ನಮ್ಮನ್ನು ಹಾಕಬೇಕೆಂದು. ನಾವು ಹೊರಗೆ ಹೋಗುವುದಿಲ್ಲ ಎಂದು. ಅವರು ಏನೇ ಆದರೂ ಹೊರಗೆ ನಮ್ಮನ್ನು ಹಾಕಬೇಕೆಂದು ಪ್ರಯತ್ನ ನಡೆಯುತ್ತಿದ್ದು ಇದು ನಿರಂತರವಾಗಿ ನಡೆದಿತ್ತು. ಆದರೆ ತಾವು ಅಧ್ಯಕ್ಷರಾದ ಮೇಲೆ ನಮಗೆ ಭಯ ಭೀತಿ ಬಂದಿದೆ. ತಮ್ಮದು ಒಂದು ರೀತಿಯ ಸ್ವಭಾವ. ಹೊರಗೆ ಹಾಕುವುದಿಲ್ಲ ಹಾಗೇ ಮುನಿಸಿಕೊಂಡು ಬಿಡುತ್ತೀರಿ. ನಿಮ್ಮ ಮುಖದ ಛಾಯೆಯಲ್ಲಿ ನಮಗೆ ತೊಂದರೆ ಕೊಡುತ್ತೀರಿ. ನಾವು ಈ ಭಯ ಭೀತಿಯಿಂದ ನಾವೇ ಒಂದು ರೀತಿ ಬದಲಾವಣೆಯಾಗಿ ಬಿಟ್ಟಿದ್ದೇವೆ. ಬಾಳಿಗಾರವರು ಅತ್ಯಂತ ಮೇಧಾವಿಗಳಾಗಿದ್ದಂತಹವರು ಅಧರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ಕೊಠಾವಳಿಯವರು ಬಗ್ಗೆ ಬೇರೆ ಮಾತಿಲ್ಲ. ವಾಟಾಳ್ ನಾಗರಾಜ್‌ರವರು ಕ್ಷಮಾಪಣೆ ಕೇಳಲೇಬೇಕು ಕೇಳದಿದ್ದರೆ ನಾನಂತೂ ಈ ಸಭೆ ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಅವರು ನಾವು ಕೇಳುವ ಹಾಗಿಲ್ಲ ಅವರು ಬಿಡುವ ಹಾಗಿಲ್ಲ. ಕೊನೆಗೆ 8 ಜನ, ಮಾರ್ಷಲ್ ಅನ್ನು ಕರೆಸಿ ನನ್ನನ್ನು ಹೊರಗೆ ಹಾಕಿಸಿದ್ದರು. ಸ್ವಲ್ಪ ಹೆಚ್ಚು ಕಡಿಮೆ ಅವರು ಅಧ್ಯಕ್ಷರಾಗಿದ್ದಾಗ ಎಂಟು ಸಲ ಹೊರಗೆ ಹಾಕಿದ್ದಾರೆ. ಇದು ಆ ಕಾಲದ ಹೋರಾಟ. ನಾವು ಈಗ ಹೋರಾಟ ಮಾಡಬೇಕೆನ್ನುವುದಕ್ಕೆ ಅವಕಾಶಗಳು ಇಲ್ಲ. ಮತ್ತು ಇಲ್ಲಿ ಅಂತಹ ಪರಿಸ್ಥಿತಿಯೂ ಆ ರೀತಿ ಇಲ್ಲ. ಮತ್ತು ಸಭೆ ಕೂಡ ಈ ವ್ಯವಸ್ಥೆಯಲ್ಲಿ ಇಲ್ಲ. ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇವತ್ತು ಬಂದ ತಕ್ಷಣ ತಮಗೆ

ಸದಸ್ಯರು ಆದಿರತಕ್ಕಂತಹ ಕೆಲವು ಮಾತಿನಿಂದ ತಮಗೆ ನೋವಾಗಿದೆ ನಿಜ. ತಾವು ಈ ಸದನದ ಯಜಮಾನರು ಅಧ್ಯಕ್ಷರು. ಹೊಸಬರು ಬಂದಿರುತ್ತಾರೆ ಹಳಬರು ಇರುತ್ತಾರೆ. ಆಡಳಿತ ಪಕ್ಷ ಇದೆ. ಕೆಲವು ಸಾರಿ ನಾವು ನಮಗೆ ಅವಕಾಶ ಕೊಡಬೇಕು ಎಂದು ಒತ್ತಾಯ ಮಾಡಿ ಕೊಟ್ಟೇ ಕೊಡಬೇಕೆಂದು ಕೇಳುತ್ತೇವೆ. ಕೇಳುವುದು ನಮ್ಮ ಹಕ್ಕು. ಆದರೆ ಕೇಳುವ ಧಾಟಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ ತಕ್ಷಣ ಆ ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ತಮಗೆ ಅಗೌರವ ಸೂಚಿಸಬೇಕೆಂದಾಗಲೀ ಇಲ್ಲವೇ ಉದ್ದೇಶಪೂರ್ವಕವಾಗಿ ಈ ಪೀಠಕ್ಕೆ ತೊಂದರೆ ಕೊಡಬೇಕೆಂದಾಗಲೀ ಕೇಳಿರುವುದಿಲ್ಲ. ಆ ಪೀಠದ ಗೌರವವನ್ನು ಕಳೆಯಬೇಕೆಂಬ ಉದ್ದೇಶ ನಮಗ್ಯಾರಿಗೂ ಇರುವುದಿಲ್ಲ. ಇದು ಸ್ಪಷ್ಟ. ನಮಗೆ ಅವಕಾಶ ಸಿಗಬೇಕೆಂಬ ಉತ್ಸಾಹದಲ್ಲಿ ಈ ಪ್ರಶ್ನೆ ಬಂದಿದೆ. ಅನೇಕ ಸಾರಿ ಮುಂದಿನ ಸಾಲಿನಲ್ಲಿರುವವರಿಗೆ ತಾವು ಕಾಲಾವಕಾಶ ಕೊಡುತ್ತೀರಿ ಎಂದು ನಮ್ಮ ಸ್ನೇಹಿತರು ಕೂಗಾಡುತ್ತಾರೆ. ಎಷ್ಟೋ ಸಲ ತಾವು ಇಲ್ಲ ಅವರ ಕಾಲವನ್ನು ಇವರಿಗೆ ಕೊಟ್ಟಿದ್ದೇವೆ ಎಂದು ರಾಜೀ ಮಾಡಿರುವುದೂ ಉಂಟು. ತಮ್ಮ ಅತ್ಯಂತ ಅನೇಕ ಒಳ್ಳೆಯ ಸ್ವಭಾವಗಳು ಈ ಸದನದ ನಡವಳಿಕೆಗೆ ಅತ್ಯಂತ ಹೆಚ್ಚಿನ ಶಕ್ತಿಯನ್ನು ತಂದಿದೆ. ನಾವು ಅದನ್ನು ಗಂಭೀರವಾಗಿ ಯೋಚಿಸಿ ಮಾಡಿದ್ದೇವೆ. ಆದರೆ ಇವತ್ತು ತಾವು ಇದ್ದಕ್ಕಿದ್ದಂತೆ ತಾವು ತೆಗೆದುಕೊಂಡ ನಿರ್ಧಾರ ನಾವೆಲ್ಲರೂ ಸೇರಿ ಪರಿಸ್ಥಿತಿಯನ್ನು ಚಿಂತನೆ ಮಾಡಬೇಕಾಗಿ ಬಂತು. ಮಾನ್ಯ ಮುಖ್ಯಮಂತ್ರಿಗಳು ಕಡತವನ್ನು ತರಿಸಿ ನೋಡಿ ಕೊನೆಗೆ ಮನಸ್ಸಿನಲ್ಲಿ ಅವರೂ ಬಹಳ ನೋವುಪಟ್ಟರು. ಈ ರೀತಿಯಾಗಬಾರದೆಂದು ಹೇಳಿದರು. ಎಲ್ಲಾ ವಿರೋಧ ಪಕ್ಷಗಳೂ ಸೇರಿದರು, ನಿಮ್ಮ ಮನೆಗೆ ಹೋಗೋಣವೆಂದರೆ ಎಲ್ಲಿ ಇದ್ದೀರಿ ಎಂದು ವಿಚಾರ ಮಾಡುತ್ತಿದ್ದೆವು. ತಕ್ಷಣ ತಾವು ರಾಜೀನಾಮೆ ಕೊಟ್ಟು ಮನೆ ಖಾಲಿ ಮಾಡುವುದಕ್ಕೆ ಬೇರೆ ಕಾರಿನಲ್ಲಿ ಹೋಗುವಂತಹ ಪರಿಸ್ಥಿತಿ ಬಂತು. ನಿಮ್ಮ ಸ್ವಭಾವ ಆ ರೀತಿ ಇದೆ. ಇದನ್ನು ನಾವೆಲ್ಲರೂ ಹತ್ತಿರದಲ್ಲಿ ನೋಡಿರತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳು ನಂಜೇಗೌಡರು ಹಾಗೂ ಪಾಟಾಳ್ ನಾಗರಾಜ್‌ರವರು ನೀವಿಬ್ಬರೂ ಹೋಗಿ ತಮ್ಮನ್ನು ಕರೆದುಕೊಂಡು ಬರಬೇಕೆಂದು ನಮ್ಮನ್ನು ನೇಮಿಸಿದರು. ಇಡೀ ವಿರೋಧ ಪಕ್ಷವೂ ಹೇಳಿದರು. ತಾವು ನಮ್ಮ ಮಾತಿಗೆ ಗೌರವ ಕೊಟ್ಟಿದ್ದೀರಿ ಅದಕ್ಕೆ ಬೆಲೆ ಸಿಕ್ಕಿತು. ಆ ಗೌರವವನ್ನು ನಾವು ಉಳಿಸಿಕೊಳ್ಳುತ್ತೇವೆ. ತಾವು ನಮ್ಮ ಮಾತಿಗೆ ಗೌರವ ಕೊಟ್ಟಿದ್ದು ಸದನದಲ್ಲಿ ಹೆಚ್ಚಿನ ಶಕ್ತಿ ಬಂದ ಹಾಗಾಯಿತು. ಸದನ ಯಾವುದೇ ಪಕ್ಷ ಭೇದವಿಲ್ಲದೆ ತಮಗೆ ತಮ್ಮ ಪೀಠಕ್ಕೆ ಎಲ್ಲಾ ರೀತಿಯ ಗೌರವವನ್ನು ಕೊಡುತ್ತೇವೆ. ಆ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲವೇ ಇಲ್ಲ. ನಾವೇನಾದರೂ ಇಲ್ಲಿ ಇದ್ದಿದ್ದರೆ ತಾವು ಹೊರಗೆ ಹೋಗುವುದಕ್ಕೆ ನಾವು ಯಾರೂ ಬಿಡುತ್ತಿರಲಿಲ್ಲವೆಂದು ಸ್ಪಷ್ಟಪಡಿಸುತ್ತೇವೆ. ಅನೇಕ ಸಂದರ್ಭದಲ್ಲಿ ನಾವುಗಳು ತಮ್ಮ ಜೊತೆ ಜಗಳವಾಡುವ ಪರಿಸ್ಥಿತಿ ಬರಬಹುದು. ಆದರೆ ತಾವು ದಯವಿಟ್ಟು ಎದ್ದು ಹೋಗಬೇಡಿ ಎಂದು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಒಂದೊಂದು ಸಲ ಆಗುತ್ತವೆ. ಮನುಷ್ಯ ಸ್ವಭಾವ ಇದು. ಸಾಮಾನ್ಯವಾಗಿ ನಾವು ಇಲ್ಲಿ ಸದಸ್ಯರಾಗಿರುತ್ತೇವೆ. ನಮಗೆ ಅವಕಾಶ ಕೊಡಲಿಲ್ಲವಲ್ಲಾ ಎನ್ನುವ ಉದ್ವೇಗ ಕೋಪ ತಾಪ ಎಲ್ಲರಿಗಿಂತಲೂ ಮೊದಲು ನಾವು ಮಾತನಾಡಬೇಕಾಗಿತ್ತು ಎನ್ನುವ ಉತ್ಸಾಹ ಇರುತ್ತದೆ. ಇದು ನಮ್ಮ ಸದನದಲ್ಲಿ ನಡೆಯತಕ್ಕಂತಹ ಪ್ರಜಾತಂತ್ರ ವ್ಯವಸ್ಥೆ. ಆದರೆ ನಮ್ಮ ಸದನ ಮತ್ತು ಬೇರೆ ಸದನವನ್ನು ಲೆಕ್ಕ ಹಾಕಿದಾಗ ನಮ್ಮದೇ ಬೇರೆಯಾಗುತ್ತದೆ. ನಮ್ಮ ಸದನಕ್ಕೆ ಇರತಕ್ಕಂತಹ ಪರಮ

ಪವಿತ್ರವಾದಂತಹ ಶಕ್ತಿ ಸದನಕ್ಕೆ ಇರುತಕ್ಕಂತಹ ಗೌರವ, ರಾಜಾಸ್ಥಾನವಾಗಿರಬಹುದು ಇಲ್ಲವೇ ಗುಜರಾತ್‌ನಲ್ಲಿ ನಡೆದುಕೊಂಡಿರತಕ್ಕಂತಹ ಪರಿಸ್ಥಿತಿಯನ್ನು ನೋಡಿದಾಗ ಇಲ್ಲಿ ಈ ರೀತಿ ಇಲ್ಲವೆಂದು ಹೇಳಬಹುದು. ಗುಜರಾತ್ ಮತ್ತು ರಾಜಾಸ್ಥಾನದಲ್ಲಿ ಅಧ್ಯಕ್ಷರನ್ನು ಸುತ್ತುವರೆದು ಅವರ ಪೀಠಕ್ಕೆ ಹೋಗಿ ಮುತ್ತಿಗೆ ಹಾಕಿದ್ದಾರೆ. ಇಲ್ಲಿ ಅಂತಹ ಪರಿಸ್ಥಿತಿ ಇಲ್ಲ. ಇಲ್ಲಿ ಮಾತಿನ ವಾದದಲ್ಲಿ ಅಧ್ಯಕ್ಷರು ಎದ್ದು ಹೋಗಿರತಕ್ಕಂಥಾದ್ದು ಇದು ಇತಿಹಾಸ. ಇದೊಂದು ಚರಿತ್ರೆಯಲ್ಲಿ ಬಂದಿರತಕ್ಕಂತಹ ಸದನ. ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಹೊಸಬರು ಬಂದಿದ್ದಾರೆ ಬೇರೆ ಬೇರೆ ವಿವಿಧ ಪಕ್ಷಗಳು ಬಂದಿವೆ. ಉತ್ಸಾಹದಲ್ಲಿ ನಾವು ಮೊದಲು ಮಾತನಾಡಬೇಕೆಂದು ಆಸೆ ಇರುತ್ತದೆ ಆ ಉತ್ಸಾಹದಲ್ಲಿ ಯಾವುದಾದರೂ ಧಾಟಿಯಲ್ಲಿ ಮಾತನಾಡುವಾಗ ತಮಗೆ ಮನಸ್ಸು ನೋವಾಗಿದ್ದರೆ ಅದಕ್ಕೆ ನಾವು ವಿಷಾದಿಸುತ್ತೇವೆ. ಆದರೆ ಆ ಧಾಟಿ ತಮ್ಮ ವಿರುದ್ಧವಲ್ಲವೆಂದು ಅತ್ಯಂತ ಗಣನೀಯವಾಗಿ ಗಮನಹರಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಯಾರಿಗೇ ಆಗಲೀ ತಮಗೆ ಅಗೌರವ ಮಾಡಬೇಕೆಂದು ಮನಸ್ಸಿನಲ್ಲಿ ಉದ್ದೇಶ ಇರುವುದಿಲ್ಲ. ತಾವು ಹೆಚ್ಚು ಮನಸ್ಸನ್ನು ಕಡಿಸಿಕೊಂಡಿದ್ದೀರಿ ತಾವು ಬೇರೆ ರೀತಿ ಸಂತೋಷವಾಗಿ ಆ ಮನಸ್ಸನ್ನು ಬೇರೆ ರೀತಿಯಲ್ಲಿ ಬದಲಾವಣೆ ಮಾಡಿ ಸದನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿ ತಮಗೆ ಎಲ್ಲ ರೀತಿಯ ಸಹಕಾರ ಬೆಂಬಲ ಕೊಡುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ತಾವು ಬಹಳ ಸೂಕ್ಷ್ಮಮತಿಗಳು. ಮನಸ್ಸಿನ ಸೂಕ್ಷ್ಮತೆ ಕಳೆದುಕೊಳ್ಳಬಾರದು. ಕೆಲವು ಸಾರಿ ಉದ್ವೇಗವನ್ನು ಹೆಚ್ಚಿಸತಕ್ಕಂತಹ ಘಟನೆಗಳು ನಡೆದಾಗಲೂ ಅದನ್ನು ನಿವಾರಣೆ ಮಾಡಿದ್ದೀರಿ. ತಾವು ಸದನದ ರಕ್ಷಕರು. ಸದನದಲ್ಲಿ ಆಗಬಾರದ್ದು ಏನಾದರೂ ಆದರೆ ಅದನ್ನು ನಿಭಾಯಿಸುವುದಕ್ಕೆ ತಾವು ಇದ್ದೀರಿ. ನಾನು ಹೌಸ್ ಆಫ್ ಕಾಮನ್ಸ್‌ನಲ್ಲಿ ಒಂದು ವಾರ ಕುಳಿತಿದ್ದೆ. ಅಲ್ಲಿನ ಸದಸ್ಯರು ಎಷ್ಟು ಸೂಕ್ಷ್ಮಮತಿಗಳು ಎಂದರೆ ಅಧ್ಯಕ್ಷರ ನೆಕ್ಸ್ಟ್ ಎಂದರೆ ಅದು ಯಾರೇ ಇರಲೀ ಮಾತನಾಡುವವರು ಅವರು ಕುಳಿತುಕೊಳ್ಳಬೇಕು. ಸ್ಪೀಕರ್ ಯಾವುದೇ ಕಾರಣಕ್ಕೆ ಒಂದು ನಿಮಿಷ ಕೊಡದಿದ್ದರೆ ಯಾರೂ ನಿಂತು ಹೆಚ್ಚು ಮಾತನಾಡುವ ಹಾಗಿಲ್ಲ. ಪ್ರತಿಯೊಬ್ಬ ಸದಸ್ಯರೂ ಹಾಗೇ ಮಾಡುತ್ತಾರೆ. ಇಲ್ಲದಿದ್ದರೆ ತಕ್ಷಣ ಮಾರ್ಷಲ್ ಬರುತ್ತಾರೆ. ಅವರು ಸದನದ ಕಾರ್ಯಕ್ರಮಗಳಪಟ್ಟಿ ಪ್ರಕಾರ ಸಮಯದ ಒಳಗೆ ಅದು ನಡೆಯಲೇ ಬೇಕು. ಅದಕ್ಕೆ ಎಲ್ಲರೂ ಬದ್ಧರು. ಅದಕ್ಕೆ ಯಾವ ಪಕ್ಷದವರೇ ಅಡ್ಡಿ ಬರಲೀ ಅವರು ಸ್ಟ್ರಿಕ್ಟ್ ಆಗಿ ಇರುತ್ತಾರೆ. ಅವರು ಮಾರ್ಷಲ್ ಅನ್ನು ಉಪಯೋಗಿಸುವ ಸಂದರ್ಭಗಳು ಬಂದಿಲ್ಲ. ಆದರೆ ಸ್ಪೀಕರ್ ಒಂದು ಸಲ ಡೈರೆಕ್ಷನ್ ಕೊಟ್ಟರೆ ಅದನ್ನು ಪ್ರಧಾನ ಮಂತ್ರಿಗಳಿಂದ ಹಿಡಿದು ಯಾರೂ ಮೀರುವುದಿಲ್ಲ. 300 ವರ್ಷದ ಕನ್‌ವೆನ್‌ಷನ್ ಬಂದಿದೆ. ಅವರಿಗೆ ರೂಲ್ ಬುಕ್ ಸಹ ಇಲ್ಲ. ಕನ್‌ವೆನ್‌ಷನ್ ಮೇಲೇ ಅವರು ಹೆಚ್ಚು ನಡೆಸುತ್ತಾರೆ. ಅದನ್ನು ನಾನು ನೋಡಿದ್ದೇನೆ. ಅಮೇರಿಕಾದ ಕಾಂಗ್ರೆಸ್ ಸೆಷನ್‌ನಲ್ಲಿ ಕೂಡ 2-3 ದಿವಸ ಕುಳಿತಿದ್ದೇನೆ. ಅಮೇರಿಕಾದ ಕಾಂಗ್ರೆಸ್‌ನಲ್ಲಿ ಅಧ್ಯಕ್ಷರು ಕುಳಿತಿರುತ್ತಾರೆ. ಅಲ್ಲಿ ಇಷ್ಟು ಜನ ಇಲ್ಲಿ ಇಷ್ಟು ಜನ 3-4, ಸದಸ್ಯರು ಕುಳಿತು ಅವರವರ ಸಮಸ್ಯೆಗಳ ಬಗ್ಗೆ ಸದನದಲ್ಲೇ ಚರ್ಚೆ ಮಾಡುತ್ತಿರುತ್ತಾರೆ. ಆ ಕಾಂಗ್ರೆಸ್‌ನ ಅಧ್ಯಕ್ಷರು ಕೂಗಿದ ತಕ್ಷಣ ಯಾರು ಯಾವ ಗುಂಪಿನ ಪರವಾಗಿ ಮಾತನಾಡಬೇಕೋ ಅವರು

ಮಾತನಾಡುತ್ತಾರೆ. ಆ ಗುಂಪಿನವರು ಒಬ್ಬರು ಮಾತನಾಡಿದ ತಕ್ಷಣ ಬೇರೆಯವರಿಗೆ ಅವಕಾಶ ಇಲ್ಲ. ಅದು ಅಮೆರಿಕನ್ ಕಾಂಗ್ರೆಸ್. ಅಮೆರಿಕನ್ ಸೆನೆಟ್ ನೋಡಿದ್ದೇನೆ. ಅಲ್ಲಿ ಎರಡು ದಿವಸ ನೋಡಿದ್ದೇನೆ. ಅಲ್ಲಿ ಒಬ್ಬರು ಸೆನೆಟ್ ಮಾತನಾಡುವಾಗ ಅಲ್ಲಿ ಹಾಗೇ ಟೈಪ್ ಆಗುತ್ತಿರುತ್ತದೆ. ಯಾರೂ ಸದನದಲ್ಲಿ ಬೇರೆ ರೀತಿಯ ಶಬ್ದ ಮಾಡುವುದಿಲ್ಲ. ಅವರವರ ಕೆಲಸವನ್ನು ಅವರು ಮಾಡುತ್ತಿರುತ್ತಾರೆ. ಒಬ್ಬ ಸೆನೆಟರ್ ಮಾತನಾಡುತ್ತಾರೆಂದು ಯಾರೂ ಕೇಳುವುದಿಲ್ಲ. ಈ ರೀತಿ ನಾನು ಮೂರು ಸದನಗಳನ್ನು ನೋಡಿದ್ದೇನೆ. ತಾವು ಬಂದ ಮೇಲೆ ಇದಕ್ಕೆ ಒಂದು ಡೈಮೆನ್ಷನ್ ಕೊಟ್ಟರಿ ಬಹಳ ಚೆನ್ನಾಗಿ ಸದನವನ್ನು ಕಂಡಕ್ಟ್ ಮಾಡಿದ್ದೀರಿ. ತಾವು ಬಂದ ಮೇಲೆ ಹೆಚ್ಚು ಸದಸ್ಯರಿಗೆ ಹೆಚ್ಚು ಅವಕಾಶ ಕೊಡುತ್ತಾ ಬಂದಿರಿ. ತೀರಾ ಸ್ಟ್ರಿಕ್ಟ್ ಆಗಿ ಇರುತ್ತಾರೆ. ಅವರು ಮಾರ್ಷಲ್ ಅನ್ನು ಉಪಯೋಗಿಸುವ ಸಂದರ್ಭಗಳು ಬಂದಿಲ್ಲ. ಆದರೆ ಸ್ಪೀಕರ್ ಒಂದು ಸಲ ಡೈರೆಕ್ಷನ್ ಬಂದಿದೆ. ಅವರಿಗೆ ರೂಲಬುಕ ಸಹ ಇಲ್ಲ. ಕನ್ವೆನ್ಷನ್ ಮೇಲೆ ಅವರು ಹೆಚ್ಚು ನಡೆಸುತ್ತಾರೆ. ಅದನ್ನೂ ನಾನು ನೋಡಿದ್ದೇನೆ. ಅಮೇರಿಕಾದ ಕಾಂಗ್ರೆಸ್ ಸೆಷನ್‌ನಲ್ಲಿ ಕೂಡ 2-3 ದಿವಸ ಕುಳಿತಿದ್ದೇನೆ. ಅಮೆರಿಕಾದ ಕಾಂಗ್ರೆಸ್‌ನಲ್ಲಿ ಅಧ್ಯಕ್ಷರು ಕುಳಿತಿರುತ್ತಾರೆ. ಅಲ್ಲಿ ಇಷ್ಟು ಜನ ಇಲ್ಲಿ ಇಷ್ಟು ಜನ 3-4 ಸದಸ್ಯರು ಕುಳಿತು ಅವರವರ ಸಮಸ್ಯೆಗಳ ಬಗ್ಗೆ ಸದನದಲ್ಲೇ ಚರ್ಚೆ ಮಾಡುತ್ತಿರುತ್ತಾರೆ. ಆ ಕಾಂಗ್ರೆಸ್‌ನ ಅಧ್ಯಕ್ಷರು ಕೂಗಿದ ತಕ್ಷಣ ಯಾರು ಯಾವ ಗುಂಪಿನ ಪರವಾಗಿ ಮಾತನಾಡಬೇಕೋ ಅವರು ಮಾತನಾಡುತ್ತಾರೆ. ಆ ಗುಂಪಿನವರು ಒಬ್ಬರು ಮಾತನಾಡಿದ ತಕ್ಷಣ ಬೇರೆಯವರಿಗೆ ಅವಕಾಶ ಇಲ್ಲ. ಅದು ಅಮೆರಿಕನ್ ಕಾಂಗ್ರೆಸ್. ಅಮೆರಿಕನ್ ಸೆನೆಟ್ ನೋಡಿದ್ದೇನೆ. ಅಲ್ಲಿ ಎರಡು ದಿವಸ ನೋಡಿದ್ದೇನೆ. ಅಲ್ಲಿ ಒಬ್ಬರು ಸೆನೆಟರ್ ಮಾತನಾಡುವಾಗ ಅಲ್ಲಿ ಹಾಗೇ ಟೈಪ್ ಆಗುತ್ತಿರುತ್ತದೆ. ಯಾರೂ ಸದನದಲ್ಲಿ ಬೇರೆ ರೀತಿಯ ಶಬ್ದ ಮಾಡುವುದಿಲ್ಲ. ಅವರವರ ಕೆಲಸವನ್ನು ಅವರು ಮಾಡುತ್ತಿರುತ್ತಾರೆ. ಒಬ್ಬ ಸೆನೆಟರ್ ಮಾತನಾಡುತ್ತಾರೆಂದು ಯಾರೂ ಕೇಳುವುದಿಲ್ಲ. ಈ ರೀತಿ ನಾನು ಮೂರು ಸದನಗಳನ್ನು ನೋಡಿದ್ದೇನೆ. ತಾವು ಬಂದ ಮೇಲೆ ಇದಕ್ಕೆ ಒಂದು ಡೈಮೆನ್ಷನ್ ಕೊಟ್ಟರಿ ಬಹಳ ಚೆನ್ನಾಗಿ ಸದನವನ್ನು ಕಂಡಕ್ಟ ಮಾಡಿದ್ದೀರಿ. ತಾವು ಬಂದ ಮೇಲೆ ಹೆಚ್ಚು ಸದಸ್ಯರಿಗೆ ಅವಕಾಶ ಕೊಡುತ್ತಾ ಬಂದಿರಿ. ತೀರಾ ಸ್ಟ್ರಿಕ್ಟ್ ಆಗಿ ಇರುವುದಕ್ಕೆ ಹೋಗಲಿಲ್ಲ. ಈ ಕಡೆಯೂ ಅಷ್ಟೇ ಆ ಕಡೆಯೂ ಅಷ್ಟೇ. ತೀರಾ ಸ್ಟ್ರಿಕ್ಟಾಗಿ ಇರುವುದಕ್ಕೆ ಆಗದೇ ಇದ್ದುದ್ದನ್ನು ಅಥವಾ ಆಗಬಾರದೆಂದು ತಾವು ಮಾಡಿದ ಮನಸ್ಸನ್ನು ಸದನದ ಮತ್ತು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಅದನ್ನು ಅರ್ಥ ಮಾಡಿಕೊಳ್ಳದೆ ನಿಮ್ಮ ಧಾರಾಳತನವನ್ನು

1.50 ಪಿ.ಎಂ.

ನಾವು ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳುತ್ತಾ ಹೋಗಿ ಈ ಸ್ಥಿತಿಗೆ ಬಂತು. ಆದರೆ ನಾನು ರೆಕಾರ್ಡ್ಸ್ ತರಿಸಿ ನೋಡಿದ್ದೇನೆ. ಮಾನ್ಯ ಸದಾನಂದಗೌಡರು ಹೇಳಿದ್ದರಲ್ಲಿ ಯಾವುದೇ ತಮ್ಮ ಬಗ್ಗೆ ಅಪಾದನೆ ಇಲ್ಲ. ತೆಗೆಸಿ ನೋಡಿದ್ದೇನೆ. ಇಲ್ಲದಿದ್ದರೆ ನಾನು ಅದನ್ನು ಮೂವ್ ಮಾಡುತ್ತಿದ್ದೆ. ಮೊದಲು ಹೊಡೆದು ಹಾಕಬೇಕು. ಏಕೆ ಅವೇಶ ಬಂತೋ ನನಗೆ ಗೊತ್ತಿಲ್ಲ. ನಾನು ಆಗ ಇರಲಿಲ್ಲ. ಆಡಳಿತ ಪಕ್ಷದ ಸದಸ್ಯರುಗಳು ಸರಿಯಾಗಿ ಅಟೆಂಡ್ ಆಗುತ್ತಿಲ್ಲ ಎಂದು ತಮಗೆ ಕೋಪ ಬಂದಿದ್ದರೆ ನಾನು ಕ್ಷಮಿಸಿ ಎಂದು ಹೇಳುತ್ತೇನೆ. ಅಮೇಲೆ ನಮ್ಮ ಸದಸ್ಯರಿಗೂ ಹೇಳುತ್ತೇನೆ. ಅಧ್ಯಕ್ಷರಿಗೆ ಇಂಥ

ಸಂಕಟದ ಪ್ರಸಂಗ ಬರದಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಅವರು ವಿರೋಧ ಪಕ್ಷದವರು ಬರಲಿ, ಬರದೆ ಇರಲಿ ನಾವು ಹೇಳುವುದು ಇಷ್ಟೆ. ಅದು ಸ್ಪೀಕರ್ ಅವರ ಆಕ್ಷನ್‌ನಲ್ಲಿ ಅವರನ್ನು ಕಂಟ್ರೋಲ್ ಮಾಡಬಹುದೇ ಹೊರತು ಬರಲಿ ಬಿಡಲಿ ಎಂದು ಹೇಳುವಹಾಗೆ ಇಲ್ಲ. ಆದರೂ ಏನಾದರೂ ಸಾಧ್ಯವೋ ಈ ಸರ್ಕಾರಕ್ಕೆ ಛಡ್ಡಿ ಹಾಕುವುದಕ್ಕೆ ಏನಾದರೂ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಸದಸ್ಯರು ಎಲ್ಲರೂ ಮಾಡುತ್ತಿದ್ದಾರೆ. ಈಗ ಬಹಳ ಸಕ್ಸಸ್‌ಫುಲ್ ಆಗಿ ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಅದರ ಬಗ್ಗೆ ನಾನೇನೂ ಹೇಳುವುದು ಬೇಕಿಲ್ಲ. ಮಾನ್ಯ ವಾಟಾಳ್‌ರೇ, ನಾನು ಎಷ್ಟು ವರ್ಷ ಈ ಸದನದಲ್ಲಿದ್ದೇನೆ, ತಾವು ಎಷ್ಟು ವರ್ಷ ಇದ್ದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ವಿಷಯಾಂತರವಾಗುತ್ತಿದೆ. ನಾವು ಇನ್ನು ಮುಂದೆ ಸದನವನ್ನು ಹೇಗೆ ನಡೆಸಬೇಕು ಎಂದು ಮಾಡಿ ತೋರಿಸುತ್ತೇವೆ. ಶಾಂತವಾಗಿಯೇ ನಿಮ್ಮ ಸರ್ಕಾರ ಈ ಜನ ವಿರೋಧ ನೀತಿಯನ್ನು ಸಹಿಸಿಕೊಂಡು ಹೇಗೆ ಬೇಕೋ ಹಾಗೆ ನಡೆಸಿಕೊಂಡು ಹೋಗುತ್ತೀರಲ್ಲಾ, ಇದನ್ನು ಸರಿಯಾಗಿ ಎಫೆಕ್ಟೀವಾಗಿ ಮಾಡುತ್ತಿಲ್ಲ. ಇನ್ನು ಮುಂದೆ ಸರಿಯಾಗಿ ಮಾಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್ : ಆಯಿತು ಬಹಳ ಒಳ್ಳೆಯದು. ಹಿಂದೆಯೂ ಮಾಡಿದ್ದೀರಿ. ಈಗಲೂ ಮಾಡುತ್ತೀರಿ. ಮುಂದೆಯೂ ಮಾಡುತ್ತೀರಿ, ಅಂದರೆ ಇನ್ನು ಬರುವ ಹತ್ತು ವರ್ಷ ಕೂಡ ನೀವು ಅಲ್ಲೇ ಇರಿ. ನಾವು ಇಲ್ಲೇ ಇರುತ್ತೇವೆ. ದಯವಿಟ್ಟು ಯಾವುದೇ ಕಾರಣದಿಂದ ನಮ್ಮ ಕಡೆಯಿಂದ ತಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ. ಇನ್ನು ಮುಂದೆ ಹಾಗೆ ಆಗದ ಹಾಗೆ ನೋಡಿಕೊಳ್ಳುತ್ತೇವೆ. ತಾವು ಇದೊಂದು ಕೆಟ್ಟ ಗಳಿಗೆ ಎಂದು ಮರೆತು ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಮನವಿ ಮಾಡುತ್ತಿರುವುದು ನಾವು ವಿರೋಧ ಪಕ್ಷದವರು ಏನೇ ಮಾತನಾಡಿದರೂ ತಮ್ಮಲ್ಲಿ ಮಂತ್ರಿಗಳೂ ಬರುವುದಿಲ್ಲ ಮತ್ತು ಶಾಸಕರು ಇರುವುದಿಲ್ಲ. ಅಂದರೆ ನಮ್ಮ ಸಮಯ ಹಾಳು ಮಾಡುತ್ತಾರೆಂದು ಅದಕ್ಕೇನಾದರೂ ಮುನಿಸಿಕೊಂಡು ಬರುತ್ತಿಲ್ಲವೋ ಹೇಗೆ?

ಶ್ರೀ ಜೆ.ಹೆಚ್. ಪಟೇಲ್ : ಇರಬಹುದೇನೋ.

ಶ್ರೀ ವಾಟಾಳ್ ನಾಗರಾಜ್ : ಬರುವುದೇ ಬೇಡ ನಾವು ಇನ್ನೇನು ಹೇಳೋಣ.

ಶ್ರೀ ಹೆಚ್.ಎನ್. ನಂಜೇಗೌಡ : ಈ ಹಗರಣಕ್ಕೆ ಕಾರಣ ಇದು ಏತಕ್ಕೆ ಬಂತು ಎಂದರೆ ನಾನು ಇರಲಿಲ್ಲ. ಬಿರ್ಗೆಯವರು ಪ್ರಸ್ತಾಪ ಮಾಡಿದರು, ಇವರೇ ಕೋರಂ ಮಾಡಿಕೊಳ್ಳುವುದು ಈ ಕಜ್ಜಿಯವರೇ, ಇವರೇ ಭಾಷಣ ಮಾಡಿಕೊಳ್ಳುವವರು, ಇವರೇ ಕೇಳಿಕೊಳ್ಳುವವರು ಸ್ಪೀಕರ್ ಏನು ಮಾಡಬೇಕು? ಮೂರು ಜನ ಮಂತ್ರಿಗಳಿದ್ದರಂತೆ. ಮೂರು ಜನ ಸದಸ್ಯರುಗಳಿದ್ದರಂತೆ ಆ ಕಡೆಯಿಂದ ಹಾಗೆ ಇದು ಶುರುವಾಯಿತು. ಆ ಪೇಚಿಗೆ ಸ್ಪೀಕರ ಸಿಕ್ಕದಂತೆ ತಾವು ನೋಡಿಕೊಳ್ಳಬೇಕು ಎಂದು ಒಂದು ವಿನಂತಿ.

ಶ್ರೀ ವಾಟಾಳ್ ನಾಗರಾಜ್ : ಸದಸ್ಯರೇ ಇರಲಿಲ್ಲ. ಮೂರು ಜನ ಮಂತ್ರಿಗಳು. ಇದನ್ನು ಯಾರಿಗೆ ಹೇಳಬೇಕು, ಮಾಡಬೇಕು ಎನ್ನುವುದಲ್ಲ. ಆಗ ನಾವು ನಿಂತುಕೊಂಡು ಸದಸ್ಯರು ಇಲ್ಲ, ಮಂತ್ರಿಗಳು ಇಲ್ಲ ಎಂದು ಹೇಳುವುದು. ಇದು ಒಂದು ಸಾರಿಯಲ್ಲ. ಈ ಸಾರಿ ಪ್ರಾರಂಭವಾದಾಗ ಸುಮಾರು 15 ದಿವಸಗಳಿಂದ ನಾಲ್ಕು ಸಾರಿ ಕೇಳಿದ್ದೇವೆ ಬಂದಿಲ್ಲ, ಬಂದಿಲ್ಲ ಎಂದು. ಅವರು ಬರುತ್ತಾರೆ ಎಂದು ಹೇಳುವುದು.

ಶ್ರೀ ಜೆ.ಹೆಚ್. ಪಟೇಲ್ : ನಮ್ಮ ಸೈನಿಕರು ಯುದ್ಧವಾಗುತ್ತದೆ ಎಂದರೆ ಬರುತ್ತಾರೆ. ಇಲ್ಲದಿದ್ದರೆ ಸುಮ್ಮನೆ ಬರುವುದಿಲ್ಲ. ಅಲ್ಲಿ ಇಲ್ಲಿ ಕುಳಿತುಬಿಡುತ್ತಾರೆ. ಅದೊಂದು ಕೆಟ್ಟ ಛಾಳಿ ಇದೆ ನಮ್ಮ ಸೈನಿಕರಿಗೆ.

ಶ್ರೀ ವಾಟಾಳ್ ನಾಗರಾಜ್ : ಯುದ್ಧವೇ ಇಲ್ಲ. ಸುಮ್ಮನೆ ಉತ್ತರನ ರೀತಿ ಮಾತನಾಡಿದರೆ ಹೇಗೆ?

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಆದಿಯಿಂದ ಅಂತ್ಯದವರೆಗೂ ಬರೀ ಕವಿಯಾಗೇ ಇರುತ್ತೇವೆ. ಬಾಯಿಯಂತೂ ಇಲ್ಲ. ಬರೀ ಕವಿಯಾಗೇ ಇರುತ್ತೇವಲ್ಲಾ. ಇನ್ನೇನು?

ಅಧ್ಯಕ್ಷರು : ಗೌರವಾನ್ವಿತ ಸದಸ್ಯರುಗಳೇ, ಮೂಲತಃ ನನಗೆ ನನ್ನ ವಯಸ್ಸು ಮತ್ತು ಈ ಸ್ಥಾನದ ಜವಾಬ್ದಾರಿ ಮತ್ತು ನನ್ನ ಸ್ವಭಾವ ಮೂರು ಪೂರ್ಣ ಇನ್ನೂ ಹೊಂದಾಣಿಕೆಯಾಗಿಲ್ಲವೇನೋ. ನಾನೇ ಇನ್ನು ಪೂರ್ಣ ಪ್ರಮಾಣದಲ್ಲಿ ಇಷ್ಟು ಜವಾಬ್ದಾರಿ ಸ್ಥಾನಕ್ಕೆ ಅರ್ಹನಾಗಿಲ್ಲವೇನೊ ಎನ್ನುವ ಒಂದು ಅನುಮಾನ ನನ್ನನ್ನು ಕಾಡುತ್ತಿದೆ. ಈ ಸದನದಲ್ಲಿ ತಮ್ಮ ತಮ್ಮ ಮಧ್ಯೆಯೇನಾದರೂ ಒಂದು ವಿವಾದವುಂಟಾದರೆ, ಚರ್ಚೆಯುಂಟಾದರೆ ಅಥವಾ ಯಾವುದಾದರೂ ಒಂದು ವಿಧವಾದ ಕಾಂಟ್ರೊವರ್ಸಿ ಬಂದರೆ ನಾನು ಕೇಂದ್ರಸ್ಥಾನದಲ್ಲಿದ್ದು ಅದನ್ನು ನಿವಾರಣೆ ಮಾಡಬೇಕು. ನಾನೇ ಒಂದು ವಿವಾದಗ್ರಸ್ತ ವ್ಯಕ್ತಿಯಾಗಿ ಈ ರೀತಿ ಸನ್ನಿವೇಶ ಉಂಟಾಗತಕ್ಕದ್ದು ನನಗೆ ಬಹಳ ಮುಜುಗರ ಮತ್ತು ನಾಚಿಕೆ ಎರಡನ್ನು ಉಂಟು ಮಾಡುತ್ತದೆ. ಏಕೆಂದರೆ ನನ್ನ ಒಳಗಿರುವ ಭಾವನೆಯನ್ನು ನಾನು ಬೇರೆ ಹೇಳಿಕೊಳ್ಳುವುದಕ್ಕೆ ನನಗೆ ಇನ್ನೆಲ್ಲೂ ಜಾಗ ಇಲ್ಲ. ಇಲ್ಲೇ ಹೇಳಿಕೊಳ್ಳಬೇಕು. ಯಾವ ಸದಸ್ಯರ ಮೇಲೂ ನನಗೆ ದ್ವೇಷ ಇಲ್ಲ. ಯಾವ ವಿಚಾರದಲ್ಲೂ ನಾನು ಪೂರ್ವಗ್ರಹಪೀಡಿತನಾಗಿಲ್ಲ. ಎಲ್ಲೋ ಒಂದು ಕಡೆಗೆ ನಾನು ಎಷ್ಟು ಎಂದು ಪ್ರಯತ್ನಪಟ್ಟರೂ ಕೂಡ ಒಂದೊಂದು ಸಲ ನನಗೇ ಗೊತ್ತಿಲ್ಲದಂತೆ ಕೆಲವು ಸಲ ಈ ರೀತಿಯಾಗುತ್ತದೆ. ಸದಾನಂದಗೌಡರಾಗಲಿ, ಈಶ್ವರಪ್ಪನವರಾಗಲಿ ಅವರನ್ನು ನಾನು ಅಲಕ್ಷ್ಯ ಮಾಡಬೇಕು ಅಥವಾ ಆ ಕ್ಷಮಾಪಣೆಗಳಿಂದ ನನಗೆ ಗೌರವ ಬರುತ್ತದೆ, ತೃಪ್ತಿ ತರುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತಿಲ್ಲ. ಏನಾದರೂ ಇಲ್ಲಿ ಆಗಬಾರದ್ದು ಆದರೆ ನಾನು ತಾವು ಎಲ್ಲರೂ ಸೇರಿ ಕ್ಷಮೆ ಕೋರಬೇಕಾಗಿರುವುದು ನಮ್ಮನ್ನು ಇಲ್ಲಿಗೆ ಕಳುಹಿಸಿದ ಜನರದ್ದು. ಒಂದೊಂದು ಸಲ ನಮ್ಮದೇ ಆದಂಥ ಕಾರಣಗಳಿಗಾಗಿ ಕೆಲವರಿಗೆ ಅಹಂಕಾರ ಇರುತ್ತದೆ. ಕೆಲವರಿಗೆ ಕೀಳರಿಮೆ ಇರುತ್ತದೆ. ಕೆಲವರಿಗೆ ಇನ್ನು ಬೇರೆ ರೀತಿ ದೌರ್ಬಲ್ಯ ಇರುತ್ತದೆ. ನನಗೆ ಸ್ವಲ್ಪಮಟ್ಟಿಗೆ ಕೀಳರಿಮೆ ನನ್ನನ್ನು ಕಾಡುತ್ತದೇನೋ ಎಂದು ಕೂಡ ಅನಿಸುತ್ತದೆ. ನನ್ನಿಂದ ಏನು ಒಂದು ಅನಗತ್ಯವಾಗಿದ್ದ ವಿವಾದ ಇಲ್ಲಿ ಉದ್ಭವವಾಯಿತು, ಅದಕ್ಕೆ ನಾನು ಸದನದ ಕ್ಷಮೆ ಕೋರುತ್ತಿದ್ದೇನೆ. ನನಗೆ ಒಂದೇ ಬೇಸರ ಆದದ್ದು. ಸದಾನಂದಗೌಡರು

ಮಾತನಾಡುವ ಆತುರದಲ್ಲಿ ಅವರಿಗೆ ನೀವು ರಕ್ಷಣೆ ಕೊಡುತ್ತಿದ್ದೀರಿ, ಅವರ ಪರ ಮಾತನಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದರೇನೋ ಎಂದು ಅನಿಸಿತು ನನ್ನ ಮನಸ್ಸಿಗೆ. ನಾನು ಬಹುಶಃ ಅದನ್ನೇ ನಾನು ಹೇಳುವುದಕ್ಕೂ ಪ್ರಯತ್ನಪಟ್ಟಿದ್ದೂ ಕೂಡ ಆ ಸಂದರ್ಭದಲ್ಲಿ ಹೊಸ ಸಂಪ್ರದಾಯವನ್ನು ಹಾಕಿ ಅನೇಕ ಸಲ ಸರ್ಕಾರಕ್ಕೆ ಸೂಚನೆಗಳನ್ನು ಕೊಟ್ಟಿದ್ದೇನೆ ನಾನು. ಪಿ.ಆರ್.ಪಿ. ಕೆಲಸವನ್ನು ಮಾಡಿ ಸದಸ್ಯರಿಗೆ ತೃಪ್ತಿಯಾಗದೇ ಹೋದರೆ ನನ್ನ ಕಛೇರಿಗೆ ಸಂಬಂಧಿಸಿದ ಮಂತ್ರಿಗಳನ್ನು ಕರೆಯಿಸಿಕೊಂಡು ಸಂಧಾನ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಟ್ಟಿದ್ದೇನೆ. ಎಲ್ಲೋ ಒಂದು ಕಡೆಗೆ ನನಗೆ ನಾನು ಇಷ್ಟೆಲ್ಲಾ ಪ್ರಯತ್ನ ಮಾಡುತ್ತೇನೆಲ್ಲಾ, ಇದು ಈ ರೀತಿ ಒಂದು ಮಾತು ನನಗೆ ಬಂದಾಗ ನಾನು ಒಂದು ರೀತಿ ಅನಾಥನಾದನೇನೋ ಇಲ್ಲಿ ಎನ್ನುವ ಒಂದು ಭಾವನೆ ಬಂತು ನನಗೆ. ಆ ಕಾರಣದಿಂದ ನಾನು ಸ್ವಲ್ಪ ದುಡುಕಿದ್ದೇನೆ. ವಾಟಾಳರು ಒಂದು ಮಾತನ್ನು ಹೇಳಿದರು, ತಾವು ಬಿಟ್ಟುಹೋಗಬಾರದು ಎಂದು ಹೇಳಿ. ಮುಖ್ಯಮಂತ್ರಿಗಳು ಬಹಳ ಸೂಕ್ಷ್ಮವಾಗಿ ಹೇಳಿದರು, ಸೂಕ್ಷ್ಮಮತಿಗಳು, ಉದ್ವೇಗಕ್ಕೆ ಒಳಗಾಗಬಾರದು ಎನ್ನುವ ಅದೇ ಮಾತನ್ನು ಇನ್ನೂ ಹೆಚ್ಚು ಬುದ್ಧಿವಂತಿಕೆಯಿಂದ ಹೇಳಿದರು. ಅಂಥದ್ದಕ್ಕೆ ನಾನು ಅವಕಾಶ ಕೊಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ತಮಗೆ ಕೊಡುತ್ತೇನೆ. ನಾನೂ ಕೂಡ ಸುಧಾರಿಸಬೇಕಾಗಿದೆ, ಸುಧಾರಿಸುವ ಪ್ರಯತ್ನವನ್ನು ಮಾಡುತ್ತೇನೆ. ತಮ್ಮೆಲ್ಲರಲ್ಲೂ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ. ತಾವು ಎಷ್ಟೇ ಉದ್ವೇಗಿಂದ ಮಾತನಾಡಿ. ಎಷ್ಟೇ ತೀವ್ರವಾಗಿ ಮಾತನಾಡಿ. ಯಾವ ವಿಚಾರದಲ್ಲಾದರೂ ನೀವು ಚರ್ಚೆ ಮಾಡಿ. ಯಾರನ್ನು ಬೇಕಾಗಿದ್ದರೂ ತರಾಟೆಗೆ ತೆಗೆದುಕೊಳ್ಳಿ. ಯಾವ ಆಪಾದನೆಗಳನ್ನು ಬೇಕಾದರೂ ಮಾಡಿ. ನಾನು ಅದಕ್ಕೆ ಅಡ್ಡ ಬರುವುದಿಲ್ಲ. ಅಂದರೆ ನಾನು ಪ್ರಾಮಾಣಿಕವಾಗಿ, ನಿಷ್ಠೆಯಿಂದ, ಮನಃಪೂರ್ವಕವಾಗಿ ಈ ಜವಾಬ್ದಾರಿಯನ್ನು ನಾನು ನಿರ್ವಹಣೆ ಮಾಡುತ್ತಿದ್ದೇನೆ. ಎಲ್ಲೋ ಒಂದು ಕಡೆಗೆ ನನ್ನ ನಿಷ್ಠೆಯನ್ನು ಅನುಮಾನಿಸುತ್ತಿದ್ದಾರೇನೊ ಎನ್ನುವ ಒಂದು ಭಾವನೆ ನನ್ನ ಮನಸ್ಸಿಗೆ ಬಂದಾಗ ಬಹಳ ನನಗೆ ತಡೆದುಕೊಳ್ಳುವುದಕ್ಕೆ ಆಗದೇ ಇರುವಷ್ಟು ವ್ಯಥೆಯಾಗುತ್ತದೆ. ನನ್ನ ಸ್ವಾಭಿಮಾನ ಮತ್ತು ಗೌರವ ಎರಡೇ ನನ್ನ ಉಸಿರು. ಆ ಉಸಿರು ನಿಂತು ಹೋದರೆ ಅಥವಾ ಅದಕ್ಕೆ ಧಕ್ಕೆ ಬಂದರೆ ನನಗೆ ಮುಂದುವರೆಯುವುದು ಕಷ್ಟವಾಗುತ್ತದೆ. ನಾನು ತಮಗೆಲ್ಲರಿಗೂ ಕೂಡ ಒಂದು ರೀತಿಯ ಮನಸ್ಸಿಗೆ ಬೇಸರ ಮಾಡಿಸಿದ್ದೇನೆ. ವಿಶೇಷವಾಗಿ ನನ್ನ ಗೆಳೆಯರಲ್ಲಿ ಶ್ರೀಮಾನ್ ಈಶ್ವರಪ್ಪನವರಲ್ಲಿ ಮತ್ತು ಸದಾನಂದಗೌಡರಲ್ಲಿ ನಾನೇ ಹೇಳುತ್ತೇನೆ, ನೀವು ಮನಸ್ಸಿಗೆ ಬೇಸರಮಾಡಿಕೊಳ್ಳಬೇಡಿ. ನೀವೇನೂ ಅಪರಾಧ ಮಾಡಿದ್ದೀರಿ ಎನ್ನುವ ಭಾವನೆ ನಿಮ್ಮ ಮನಸ್ಸಿಗೂ ಬರುವುದು ಬೇಡ. ನಾನೇ ನನ್ನ ಮನಸ್ಸನ್ನು ಹಗುರ ಮಾಡಿಕೊಂಡಿದ್ದೇನೆ. ನಮ್ಮ ಬಾಂಧವ್ಯ ಎಂದಿನಂತೆ ಇರುತ್ತದೆ. ಇದೊಂದು ವಿಷ ಗಳಿಗೆ ಎಂದು ಹೇಳಿ ತಿಳಿದುಕೊಳ್ಳೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಊಟದ ವ್ಯವಸ್ಥೆ ಮಾಡಿದ್ದಾರೆ. ವಿಶೇಷವಾಗಿ ನನ್ನ ಪತ್ರಿಕಾ ಸ್ನೇಹಿತರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಇಡೀ ಘಟನೆಯ ಸ್ವರೂಪ ಜನರ ಮನಸ್ಸಿನ ಮೇಲೆ ಯಾವುದೇ ಒಂದು ರೀತಿಯ ಕೆಟ್ಟ ಪರಿಣಾಮ ಆಗಲಾರದಂತೆ ದಯಮಾಡಿ ಈ ಒಂದು ವಿಚಾರದಲ್ಲಿ ನಾನು ಎಂದು ನಿಮ್ಮನ್ನು ಯಾವ ವಿಷಯದಲ್ಲೂ ಕೀಳಿಲ್ಲ. ನನ್ನ ವಿಚಾರದಲ್ಲಿ ತಾವು ಬಹಳ ಸಹಕರಿಸಿದ್ದೀರಿ. ನೀವು ನಮ್ಮ ಪ್ರಜಾಪ್ರಭುತ್ವದಲ್ಲಿ ಬಹಳ ಪ್ರಮುಖವಾದ ಅಂಗ. ಆ ಕಾರಣದಿಂದ ದಯಮಾಡಿ ಜನರ ಮನಸ್ಸಿನಲ್ಲಿ ಯಾವ ಕೆಟ್ಟ ಅಭಿಪ್ರಾಯ

ಬರಲಾರದ ರೀತಿಯಲ್ಲಿ ಇದನ್ನು ತಿಳಿಸಬೇಕು ಎಂದು ವಿನಂತಿ ಮಾಡಿಕೊಂಡು ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೆ ಹಾಕುತ್ತೇನೆ. ಪುನಃ ನಾವು 3-00 ಗಂಟೆಗೆ ಸಮಾವೇಶಗೊಳ್ಳೋಣ. ಎಲ್ಲಾ ಮಾನ್ಯ ಸದಸ್ಯರೂ ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಊಟಕ್ಕೆ ವ್ಯವಸ್ಥೆ ಮಾಡಿದ್ದಾರೆ. ಎಲ್ಲರೂ ಬರಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಸದನವು 2-01ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು.)

ಸದನವು 3.00 ನಿಮಿಷಕ್ಕೆ ಪ್ರಾರಂಭವಾಯಿತು.

(ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಾಮಗಾರಿಗಳ ಬಗ್ಗೆ ಕ್ಷೇತ್ರಾವಾರು ಪಟ್ಟಿ.

ಶ್ರೀ ವಸಂತ್ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಬಾರ್ಡ್, ಏಶಿಯನ್ ಬ್ಯಾಂಕ್ ಮತ್ತು ವಿಶ್ವಬ್ಯಾಂಕ್ ಇವುಗಳ ಆರ್ಥಿಕ ಸಹಾಯದಿಂದ ಕೈಗೊಳ್ಳುತ್ತಿದ್ದ ಕಾಮಗಾರಿಗಳ ಬಗ್ಗೆಕ್ಷೇತ್ರವಾರು ಪಟ್ಟಿಯನ್ನು ಒದಗಿಸಿಕೊಡುವ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ ಅದನ್ನು ಒದಗಿಸುತ್ತೇನೆ.

(ಆ) ಗಂಗಾರಾಮ ಕಟ್ಟಡ ಕುಸಿದ ಪ್ರಕರಣದಲ್ಲಿ ಮೇಲ್ಮನವಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 1983ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಒಂದು ದುರಂತ ನಡೆಯಿತು. ಗಂಗಾರಾಮ ಕಟ್ಟಡ ಕುಸಿದಿದೆ. ಸುಮಾರು 120 ಜನ ಅಮಾಯಕರ ಹತ್ಯೆಯಾಯಿತು, ಅದು ಒಂದು ರೀತಿಯ ಕೊಲೆಯಾಯಿತು. ಈಗ ಕಳೆದ ವಾರ ಅದಕ್ಕಿಂತ ಒಂದು ದೊಡ್ಡ ದುರಂತ ನಡೆದಿದೆ. ಎಲ್ಲಾ ಆರೋಪಿಗಳನ್ನು ಖುಲಾಸೆ ಮಾಡಿ ಕೆಳಗಿನ ಹಂತದ ಒಂದು ಕೋರ್ಟು ತೀರ್ಪು ಕೊಟ್ಟಿದೆ. ಹಿಂದೆ 1983ನೇ ಇಸವಿಯಲ್ಲಿ ಅವರದೇ ಸರ್ಕಾರ ಇತ್ತು, ಅವರು ಒಂದು ದೇಸಾಯಿ ಆಯೋಗವನ್ನು ನೇಮಿಸಿದ್ದರು. ಕಂಟ್ರಾಕ್ಟರ್ಸ್‌ಗಳನ್ನು, ಆರ್ಕಿಟೆಕ್ಟ್‌ಗಳನ್ನು, ಇಂಜನಿಯರ್ಸ್‌ಗಳನ್ನು, ಬಿಲ್ಡರ್ಸ್‌ಗಳನ್ನು ಆ ಕಮಿಟಿ ರಿಪೋರ್ಟಿನಲ್ಲಿ ಸೇರಿಸಿದ್ದಾರೆ. 120 ಜನರ ಬಲಿ ತೆಗೆದುಕೊಂಡಂಥ ಈ ಕಳಪೆ ಕಾಮಗಾರಿಗೆ ಅನುಮತಿ ಕೊಟ್ಟಿದ್ದು ಒಂದು ಕ್ರಿಮಿನಲ್ ಸೆಗ್ಲಿಜೆನ್ಸಿ ಎಂದು ಹೇಳಿದರೆ ತಪ್ಪಾಗಲಾರದು. ಆ ಎಲ್ಲಾ ಪ್ರಕರಣಗಳ ಬಗ್ಗೆ ಒಂದು ಕಮಿಟಿಯ ತೀರ್ಪು ಇದ್ದರೂ ಕೂಡ ಕೆಳಗಿನ ಹಂತದ ನ್ಯಾಯಾಲಯ ಈ ರೀತಿ ಖುಲಾಸೆ ಮಾಡಿರುತ್ತದೆ. ಅದರ ಬಗ್ಗೆ ಅಪೀಲು ಹೋಗುವುದರ ಬಗ್ಗೆಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಂಗಾರಾಮ ಕಟ್ಟಡದ ಬಗ್ಗೆ ನಾನೂ ಕೂಡ ಪ್ರಸ್ತಾಪ ಮಾಡಬೇಕೆಂದಿದ್ದೆ, ಆದರೆ ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ತಾವು ಉತ್ತರ ಹೇಳಿ.